

# ದಿ ತೋಟಗಾರ್ಸ್ ರೂರಲ್ ಕೋ-ಆಪರೇಟಿವ್ ಅಗ್ರಿಕಲ್ಚರಲ್ ಕ್ರೆಡಿಟ್ ಸೊಸೈಟಿ ಲಿ., ಶಿರಸಿ (ಉ.ಕ.)

# 107 ನೇ

## ವಾರ್ಷಿಕ ವರದಿ

## ಮತ್ತು ಅಢಾವೆ ಪತ್ರಿಕೆ 2019-20






"ಸಹಕಾರ ಎಂದರೇನೇ ಅಬಲರನ್ನು ಸಬಲರನ್ನಾಗಿಸುವುದು
ಅಬಲರನ್ನು ತಮ್ಮ ಜೊತೆ ತೆಗೆದುಕೊಂಡು ಹೋಗುವುದು
ಅಬಲನ ಸಾಮಾಜಿಕ ಅಂತಸ್ತು ಮತ್ತು ನೈತಿಕ ಸ್ಥೈರ್ಯದ
ಔನ್ನತ್ಯ ಸಾಧಿಸುವುದು ಇದರ ಗುರಿ"

– ದಿ|| ಶ್ರೀಪಾದ ಹೆಗಡೆ, ಕಡವೆ.

QR ಕೋಡ್ ಸ್ಕ್ಯಾನ್ ಮಾಡಿ
ಅಥವಾ www.trcsirsi.in ನಲ್ಲಿಯೂ ಸಹ
**ಅಢಾವೆ ಪತ್ರಿಕೆ ವೀಕ್ಷಿಸಬಹುದು**

# ಶ್ರೀ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳವರಿಂದ
# ಅನುಗ್ರಹಪೂರ್ವಕ ಆಶೀರ್ವಾದ

ದೂರವಾಣಿ : (08384) 279359 / 279311
8277370340



ಶ್ರೀಮಜ್ಜಗದ್ಗುರು ಶಂಕರಾಚಾರ್ಯ-

**-ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ**

ಅಂಚೆ : ಮಠದೇವಳ - 581 336, ತಾಲೂಕ : ಶಿರಸಿ (ಉತ್ತರ ಕನ್ನಡ) ಕರ್ನಾಟಕ

ಜಾ. ನಂ.: 55/20-21/1 ದಿನಾಂಕ :

**ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀಮದ್ ಗಂಗಾಧರೇಂದ್ರಸರಸ್ವತೀ ಮಹಾಸ್ವಾಮಿಗಳು.**

**ಮುಖ್ಯ ಕಾರ್ಯನಿರ್ವಾಹಕರು ಹಾಗೂ ಎಲ್ಲ ಪದಾಧಿಕಾರಿಗಳು,**
**ದಿ ತೋಟಗಾರ್ಸ್ ರೂರಲ್ ಕೋ-ಆಪರೇಟಿವ್ ಅಗ್ರಿಕಲ್ಚರಲ್**
**ಕ್ರೆಡಿಟ್ ಸೊಸೈಟಿ ಲಿಮಿಟೆಡ್, ಶಿರಸಿ, ಉತ್ತರ ಕನ್ನಡ.**

**ಇವರ ವಿಷಯದಲ್ಲಿ ಮಾಡುವ ಶ್ರೀಮನ್ನಾರಾಯಣಸ್ಮರಣಪೂರ್ವಕ ಆಶೀರ್ವಾದಗಳು.**

ದಿನಾಂಕ 03-11-2020, ಮಂಗಳವಾರದಂದು ಸಂಘದ 107-ನೆಯ ವಾರ್ಷಿಕ ಮಹಾಸಭೆಯನ್ನು ಆಯೋಜಿಸಿರುವ ವಿಷಯವು ವೇದ್ಯವಾಯಿತು, ಸಂತೋಷ.

ಶತಮಾನದಷ್ಟು ಸುದೀರ್ಘ ಪಯಣದಲ್ಲಿ ಕೃಷಿಕರ ಬೆನ್ನೆಲುಬಾಗಿ ನಿಂತು, ಇಂದು ಪ್ರತಿಷ್ಠಿತ ಸಹಕಾರಿ ಸಂಘವಾಗಿ ರೂಪುಗೊಂಡಿರುವ ತೋಟಗಾರ್ಸ್ ರೂರಲ್ ಕೋ-ಆಪರೇಟಿವ್ ಅಗ್ರಿಕಲ್ಚರಲ್ ಕ್ರೆಡಿಟ್ ಸೊಸೈಟಿಯು ಸಮಾಜದ ಪ್ರೀತಿ ವಿಶ್ವಾಸಗಳಿಗೆ ಪಾತ್ರವಾಗಿದೆ. ಪದಾಧಿಕಾರಿಗಳು, ಸಿಬ್ಬಂದಿಗಳು ಹಾಗೂ ಎಲ್ಲ ಸದಸ್ಯರು ಪರಸ್ಪರ ವಿಶ್ವಾಸದಿಂದ ಪಾರದರ್ಶಕ ವ್ಯವಹಾರವನ್ನು ಮುಂದುವರೆಸಿಕೊಂಡು ಹೋದಾಗ ಮಾತ್ರ ಸಂಘದ ಅಭಿವೃದ್ಧಿಯು ಸಾಧ್ಯವಾಗುತ್ತದೆ, ತನ್ಮೂಲಕ ಸಮಾಜದ ಅಭಿವೃದ್ಧಿಯೂ ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಸುದೀರ್ಘ ಕಾಲದಿಂದ ಸಾಧನಾಪಥದಲ್ಲಿ ಮುನ್ನಡೆದುಬಂದಿರುವ ಈ ಸಂಘವು ಎಲ್ಲರ ಸಹಕಾರದಿಂದ ಸಮಾಜದ ಬೆನ್ನೆಲುಬಾಗಿ ನಿಂತಿರುವುದು ನಿಜಕ್ಕೂ ಅಭಿನಂದನಾರ್ಹ ಸಂಗತಿ. ಸಂಘವು ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸುತ್ತಾ ಸಮಾಜಕ್ಕೆ ಸಹಕಾರಿಯಾಗಿರಲೆಂದು ಹಾರೈಸುತ್ತೇವೆ.

ಪ್ರಸ್ತುತ ಆಯೋಜಿಸಲ್ಪಟ್ಟ ವಾರ್ಷಿಕ ಸರ್ವಸಾಧಾರಣ ಸಭೆಯು ನಿರ್ವಿಘ್ನವಾಗಿ ಸಂಪನ್ನಗೊಳ್ಳಲಿ, ಆಡಳಿತ ಮಂಡಳಿಯ ಎಲ್ಲ ಪದಾಧಿಕಾರಿಗಳಿಗೂ, ಸದಸ್ಯರಿಗೂ, ಸಿಬ್ಬಂದಿಗಳಿಗೂ ಆರಾಧ್ಯ ಶ್ರೀ ದೇವರು ಕ್ಷೇಮಾಭ್ಯುದಯಗಳನ್ನು ಅನುಗ್ರಹಿಸಲೆಂದು ಆಶೀರ್ವದಿಸುತ್ತೇವೆ.

ಲೋಕಾಃ ಸಮಸ್ತಾಃ ಸುಖಿನೋ ಭವಂತು

ನಾರಾಯಣ ಸ್ಮೃತಿಃ

ದಿನಾಂಕ: 06-10-2020.
ಸ್ಥಳ: ಶ್ರೀ ಸ್ವರ್ಣವಲ್ಲೀ ಮಠ.

ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು,
ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ.

E-mail : info.swarnavalli@gmail.com Website : swarnavalli.in

# ದಿ ತೋಟಗಾರ್ಸ್ ರೂರಲ್ ಕೋ-ಆಪರೇಟಿವ್ ಅಗ್ರಿಕಲ್ಚರಲ್ ಕ್ರೆಡಿಟ್ ಸೊಸೈಟಿ ಲಿ., ಶಿರಸಿ (ಉ.ಕ.)

TRC Since-1913

## ಆಡಳಿತ ಮಂಡಳಿ ಸದಸ್ಯರು

| | | |
|---|---|---|
| 1) | ಶ್ರೀ ರಾಮಕೃಷ್ಣ ಶ್ರೀಪಾದ ಹೆಗಡೆ, ಕಡವೆ. | ಅಧ್ಯಕ್ಷರು |
| 2) | ಶ್ರೀ ಲೋಕೇಶ ಗುರುನಾಥ ಹೆಗಡೆ, ಹುಲೇಮಳಗಿ. | ಉಪಾಧ್ಯಕ್ಷರು |
| 3) | ಶ್ರೀ ಗಜಾನನ ವೆಂಕಟ್ರಮಣ ಜೋಶಿ, ಕಾಗೇರಿ. | ನಿರ್ದೇಶಕರು |
| 4) | ಶ್ರೀ ವಿಶ್ವನಾಥ ಗೋಪಾಲಕೃಷ್ಣ ಹೆಗಡೆ, ಸೋಮ್ನಳ್ಳಿ. | ನಿರ್ದೇಶಕರು |
| 5) | ಶ್ರೀ ವಿಶ್ವಾಸ ಮುಂಡಲೀಕ ಬಲಸೆ, ಚವತ್ತಿ. | ನಿರ್ದೇಶಕರು |
| 6) | ಶ್ರೀ ಗಣಪತಿ ಶೇಷಗಿರಿ ರಾಯ್ಸದ್, ಕಲಸಳ್ಳಿ. | ನಿರ್ದೇಶಕರು |
| 7) | ಶ್ರೀ ಸುಬ್ರಾಯ ನಾರಾಯಣ ಹೆಗಡೆ, ಹಾವಳಮನೆ. | ನಿರ್ದೇಶಕರು |
| 8) | ಶ್ರೀ ಶಿವಾನಂದ ಗಣಪತಿ ಭಟ್, ನಿಡಗೋಡ | ನಿರ್ದೇಶಕರು |
| 9) | ಶ್ರೀ ಈರಾ ನಾರಾಯಣ ಗೌಡ, ಕಳವೆ. | ನಿರ್ದೇಶಕರು |
| 10) | ಶ್ರೀ ಶ್ರೀಧರ ಕೆರಿಯಾ ಮಡಿವಾಳ, ಡೊಂಬೆ | ನಿರ್ದೇಶಕರು |
| 11) | ಶ್ರೀಮತಿ ಕಲ್ಪನಾ ಶಿವಾನಂದ ಕೊಪ್ಪಳ, ಬೇಣದಮನೆ. | ನಿರ್ದೇಶಕರು |
| 12) | ಶ್ರೀಮತಿ ಇಂದಿರಾ ವೆಂಕಟ್ರಮಣ ಹೆಗಡೆ, ಬಾಳೆಕೊಪ್ಪ. | ನಿರ್ದೇಶಕರು |
| 13) | ಶ್ರೀ ವಿಶ್ವನಾಥ ನರಸಿಂಹ ಹೆಗಡೆ, ಮೂಲೇಮನೆ | ವೃತ್ತಿಪರ ನಿರ್ದೇಶಕರು |

## ಸಿಬ್ಬಂದಿವರ್ಗ

ಶ್ರೀ ಕಿರಣ ಎಸ್. ಭಟ್ಟ — ಇನ್ಸ್‌ಪೆಕ್ಟರ್

ಶ್ರೀ ಎಂ.ಟಿ. ಮಡಿವಾಳ — ಲೆಕ್ಕಿಗ

ಶ್ರೀ ರಮೇಶ ಹೆಗಡೆ, ಬಾಳೆಗದ್ದೆ — ಮುಖ್ಯಕಾರ್ಯನಿರ್ವಾಹಕ

ಹಾಗೂ ಉಳಿದ ಸಿಬ್ಬಂದಿಗಳು

## ಶಾಸನಬದ್ಧ ಲೆಕ್ಕ ಪರಿಶೋಧನೆ

**ಸತೀಶ ಹೆಗಡೆ & ಕಂಪನಿ,** ಚಾರ್ಟರ್ಡ್ ಅಕೌಂಟಂಟ್ಸ್, ಶಿರಸಿ

## ಆಂತರಿಕ ಲೆಕ್ಕ ಪರಿಶೋಧನೆ

**ಶ್ರೀ ಆರ್.ಎನ್. ಶೇಟ್, ಶಿರಸಿ,** ನಿವೃತ್ತ ಸಹಾಯಕ ಪ್ರಧಾನ ವ್ಯವಸ್ಥಾಪಕರು
ದಿ ಕೆ.ಡಿ.ಸಿ.ಸಿ. ಬ್ಯಾಂಕ್ ಲಿ., ಶಿರಸಿ(ಉ.ಕ.)

## ಸಲಹೆಗಾರರು

**ಶ್ರೀ ಎಂ.ಆರ್. ಹೆಗಡೆ, ಶಿರಸಿ,**
ನಿವೃತ್ತ ಕಂದಾಯ ಇಲಾಖೆ ಅಧಿಕಾರಿಗಳು.

## ಮಹಸೂಲು ವಿಕ್ರಿ-ವಹಿವಾಟು

1) ದಿ ತೋಟಗಾರ್ಸ್ ಕೋ-ಆಪ್. ಸೇಲ್ ಸೊಸೈಟಿ ಲಿ., ಶಿರಸಿ ಇದರ ಪ್ರಧಾನ ಕಛೇರಿ ಮತ್ತು ಯಲ್ಲಾಪುರ ಶಾಖೆ, ಸಿದ್ದಾಪುರ ಶಾಖೆ.
2) ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿ ಲಿ., ಶಿರಸಿ (ಉ.ಕ.)

"ಕೊರೊನಾ ವೈರಸ್ ಸಾಂಕ್ರಾಮಿಕವಾಗಿ ಹರಡದಂತೆ ತಡೆಗಟ್ಟುವ ಹಿನ್ನೆಲೆಯಲ್ಲಿ ವಾರ್ಷಿಕ ಸರ್ವ ಸಾಧಾರಣಾ ಸಭೆಗೆ ಆಗಮಿಸುವಾಗ ಸದಸ್ಯರು ಕಡ್ಡಾಯವಾಗಿ ಮಾಸ್ಕ್ ಹಾಗೂ ಕೈಗವಚಗಳನ್ನು ಧರಿಸಿಯೇ ಬರಲು ಕೋರುತ್ತೇವೆ. ಮತ್ತು ಸಾಮಾಜಿಕ ಅಂತರ ಕಾಯ್ದುಕೊಂಡು ಸಭೆಯ ಕಾರ್ಯ ಕಲಾಪಗಳಲ್ಲಿ ಪಾಲ್ಗೊಳ್ಳಲು ವಿನಂತಿಸುತ್ತೇವೆ."


**ಕಚೇರಿ ಸಂಪರ್ಕ**

94492 27386 (ಆಫೀಸ್)
94491 81386 (ವಿಕ್ರಿ ವಿಭಾಗ)

08384-236886, 234461

trcacs@gmail.com

ಹೊಸ ಮಾರುಕಟ್ಟೆ ಪ್ರಾಂಗಣ,
ತಾ.ಶಿರಸಿ (ಉ.ಕ.) 581 402

ನೋಂದಣಿ ಸಂ: 673 ಸ್ಥಾಪನೆ: 12-11-1913

# ದಿ ತೋಟಗಾರ್ಸ್ ರೂರಲ್ ಕೋ-ಆಪರೇಟಿವ್ ಅಗ್ರಿಕಲ್ಚರಲ್ ಕ್ರೆಡಿಟ್ ಸೊಸೈಟಿ ಲಿ., ಶಿರಸಿ (ಉ.ಕ.)

ವಿಳಾಸ: ಹೊಸ ಮಾರುಕಟ್ಟೆ ಪ್ರಾಂಗಣ, ತಾ.ಶಿರಸಿ, ಜಿ.ಉತ್ತರ ಕನ್ನಡ

## ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರ

ಕರ್ನಾಟಕ ಸ.ಸಂ. ಕಾಯಿದೆ 1959ರ ಕಲಂ 29(ಎಫ್)2 ಮತ್ತು ಪ್ರಕರಣ 27(1)ರ ಪ್ರಕಾರ

**ಮಾನ್ಯರೇ,**

ದಿ ತೋಟಗಾರ್ಸ್ ರೂರಲ್ ಕೋ-ಆಪರೇಟಿವ್ ಅಗ್ರಿಕಲ್ಚರಲ್ ಕ್ರೆಡಿಟ್ ಸೊಸೈಟಿ ಲಿ., ಶಿರಸಿ(ಉ.ಕ.)ಯ ಸನ್ 2019-20ನೇ ಸಾಲಿನ 107ನೇ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯುನ್ನು **ತಾರೀಖು 03-11-2020, ಮಂಗಳವಾರದಂದು ಬೆಳಿಗ್ಗೆ 10 ಘಂಟೆಗೆ** ಸರಿಯಾಗಿ **ಟಿ.ಎಸ್.ಎಸ್.ಲಿ., ಶಿರಸಿ (ಉ.ಕ.) ಇದರ ಪ್ರಧಾನ ಕಚೇರಿಯ ಮಾರಾಟ ಅಂಗಳದಲ್ಲಿ** ಸಂಘದ ಅಧ್ಯಕ್ಷರಾದ **ಶ್ರೀ ರಾಮಕೃಷ್ಣ ಶ್ರೀಪಾದ ಹೆಗಡೆ, ಕಡವೆ** ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಸದಸ್ಯರೆಲ್ಲರೂ ಸಕಾಲಕ್ಕೆ ಈ ಸಭೆಗೆ ಅವಶ್ಯ ಆಗಮಿಸಬೇಕಾಗಿ ಕೋರಿದೆ.

ಆಡಳಿತ ಮಂಡಳಿ ಆದೇಶದಂತೆ
(ಸಹಿ ಇದೆ)
ಮುಖ್ಯಕಾರ್ಯನಿರ್ವಾಹಕ
**ದಿ ಟಿ.ಆರ್.ಸಿ.ಎ.ಸಿ. ಸೊಸೈಟಿ ಲಿ., ಶಿರಸಿ (ಉ.ಕ.)**

**ಸ್ಥಳ:** ಶಿರಸಿ (ಉ.ಕ.)
**ದಿನಾಂಕ:** 07-10-2020
ಜಾವಕ ಸಂಖ್ಯೆ: 299/2020-21

# ದಿ ತೋಟಗಾರ್ಸ್ ರೂರಲ್ ಕೋ-ಆಪರೇಟಿವ್ ಅಗ್ರಿಕಲ್ಚರಲ್ ಕ್ರೆಡಿಟ್ ಸೊಸೈಟಿ ಲಿ., ಶಿರಸಿ (ಉ.ಕ.)

## ಸನ್ 2019-20ನೇ ಸಾಲಿನ

## ವಾರ್ಷಿಕ ವರದಿ

**ಸಹೃದಯಿ ಸದಸ್ಯ ಬಾಂಧವರೇ,**

ಸಂಘವು ತಮ್ಮೆಲ್ಲಾ ಸಹಕಾರದೊಂದಿಗೆ 107 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ ಪ್ರಸ್ತುತ 108ನೇ ವರ್ಷಕ್ಕೆ ಪಾದಾರ್ಪಣೆ ಮಾಡಿ ಸರ್ವವಿಧದಿಂದಲೂ ಪ್ರಗತಿಯತ್ತ ಸಾಗುತ್ತಿದೆ. ಸಂಘದ ಮೇಲೆ ನಂಬಿಕೆಯಿಟ್ಟು ಪ್ರಾಮಾಣಿಕವಾಗಿ ವ್ಯವಹರಿಸಿ, ಸಂಘವು ವರ್ಷದಿಂದ ವರ್ಷಕ್ಕೆ ಪ್ರಗತಿಯ ಪಥದಲ್ಲಿ ಸಾಗಲು ಸಂಘದ ಗೌರವಾನ್ವಿತ ಸದಸ್ಯರಾದ ತಾವುಗಳೇ ಪ್ರಮುಖ ಕಾರಣೀಕರ್ತರಾಗಿರುವಿರಿ ಎಂಬ ವಿಷಯವನ್ನು ತಮ್ಮೆದುರು ಹಂಚಿಕೊಳ್ಳಲು ಹೆಮ್ಮೆ ಎನಿಸುತ್ತದೆ.

ಪ್ರಸ್ತುತ ವರ್ಷ ಎದುರಾದ ಮಹಾಮಾರಿ ಕೊರೊನಾ ಸೋಂಕಿನಿಂದ ದೇಶವ್ಯಾಪಿ ಜನಜೀವನ ಅಸ್ತವ್ಯಸ್ತವಾಗಿದೆ. ಹಿಂದೆಂದೂ ಕಂಡರಿಯದ ಸಂದಿಗ್ಧ ಪರಿಸ್ಥಿತಿ ಎದುರಾಗಿದೆ. ಇಂತಹ ಸಂದರ್ಭದಲ್ಲಿ ಸಹ ಸಂಘವು ಸದಸ್ಯರ ಹಿತಕಾಪಾಡುವಲ್ಲಿ ಹೆಚ್ಚಿನ ಗಮನವಹಿಸಿ ಕಾರ್ಯನಿರ್ವಹಿಸಿದೆ. ಈ ಅನಿವಾರ್ಯ ಪರಿಸ್ಥಿತಿಯಲ್ಲಿ ಸಹ ಗೌರವಾನ್ವಿತ ಸದಸ್ಯರು ಪರಿಸ್ಥಿತಿಯನ್ನರಿತು ಸಂಘದೊಂದಿಗೆ ಕೈಜೋಡಿಸಿರುವುದಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತಾ ನಮ್ಮ ಸಂಸ್ಥೆಯ 107ನೇ ವರ್ಷದ ವಾರ್ಷಿಕ ವರದಿ ಹಾಗೂ ಸನ್ 2019-20 ನೇ ಸಾಲಿನ ಅಢಾವೆ ಪತ್ರಿಕೆ ಮತ್ತು ಕಾರ್ಯಚಟುವಟಿಕೆಗಳ ವಿಸ್ತೃತವಾದ ವರದಿಯನ್ನು ತಮ್ಮೆದುರು ಪ್ರಸ್ತುತಪಡಿಸುತ್ತಿದ್ದೇವೆ.

ಕೇಂದ್ರ, ರಾಜ್ಯ ಸರ್ಕಾರಗಳಿಂದ ಕೃಷಿ ಸಾಲಗಳಿಗೆ ಕಾಲಕಾಲಕ್ಕೆ ದೊರಕುತ್ತಿರುವ ಬಡ್ಡಿ ರಿಯಾಯಿತಿ, ಬಡ್ಡಿ ಮನ್ನಾ, ಬಡ್ಡಿ ಪ್ರೋತ್ಸಾಹನದಂತಹ ಸೌಲಭ್ಯಗಳನ್ನು ಸದಸ್ಯರಿಗೆ ದೊರಕಿಸಿಕೊಡುವಲ್ಲಿ ಸಂಘದಿಂದ ಪ್ರಾಮಾಣಿಕ ಪ್ರಯತ್ನ ಮಾಡುತ್ತಾ ಬರಲಾಗಿದೆ. ಸಂಘದಲ್ಲಿ ವ್ಯವಹರಿಸುತ್ತಿರುವ ಹೆಚ್ಚಿನ ಸದಸ್ಯರು ಬಡ್ಡಿ ರಿಯಾಯಿತಿಗೊಳಪಡುವ ಕೃಷಿ ಸಾಲಗಳನ್ನು ಹಾಗೂ ಸರ್ಕಾರದಿಂದ ದೊರಕಬಹುದಾದ ಸಾಲ/ಬಡ್ಡಿ ಮನ್ನಾದಂತಹ ಸೌಲಭ್ಯ ಪಡೆಯುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ಇದರಿಂದ ಸದಸ್ಯರು ಆರ್ಥಿಕವಾಗಿ ಇನ್ನಷ್ಟು ಸುಧಾರಿಸಿಕೊಳ್ಳಬಹುದಾಗಿದೆ.

ಸಂಘದ ಪ್ರಗತಿಗೆ ಕಾರಣರೂ, ಸಹಕಾರ ಮನೋಭಾವನೆಯನ್ನು ಹೊಂದಿರುವ ಗೌರವಾನ್ವಿತ ಸದಸ್ಯರಾದ ತಮಗೆ ಮುಂಬರುವ ದಿನಗಳಲ್ಲಿ ಸಂಘವು ಇನ್ನೂ ಹೆಚ್ಚಿನ ಸೇವಾಸೌಲಭ್ಯ ನೀಡುವಲ್ಲಿ ಕಟಿಬದ್ಧವಾಗಿದೆ. ಈ ನಿಟ್ಟಿನಲ್ಲಿ ತಮ್ಮೆಲ್ಲರ ವಿಶ್ವಾಸ, ಸಹಕಾರ ಬಯಸುತ್ತಾ ವರದಿ ಸಾಲಿನಲ್ಲಿ ಸಂಘದ ಪ್ರಾಮುಖ್ಯ ವ್ಯವಹಾರಗಳ ಮಾಹಿತಿಗಳನ್ನು ಈ ಕೆಳಗಿನಂತೆ ಸಾದರಪಡಿಸಿದೆ.

### 1. ಸಂಘದಲ್ಲಿ ಶೇರು ಸದಸ್ಯತ್ವ :

ಸಂಘದ ಶೇರು ಸದಸ್ಯತ್ವಬೇಕೆಂದು ಅರ್ಜಿ ಸಲ್ಲಿಸುವ ಅರ್ಹ ವ್ಯಕ್ತಿಗಳಿಗೆ ಶೇರು ಸದಸ್ಯತ್ವವನ್ನು ನೀಡಲಾಗುತ್ತಿದೆ. ವರದಿ ವರ್ಷಾರಂಭದಲ್ಲಿ 3214 ಶೇರು ಸದಸ್ಯರಿದ್ದು, ಪ್ರಸಕ್ತ ಸಾಲಿನಲ್ಲಿ 148 ವ್ಯಕ್ತಿಗಳು ಶೇರು ಸದಸ್ಯರಾಗಿ ಸೇರ್ಪಡೆಯಾಗಿರುತ್ತಾರೆ. ಅದರಂತೆ 78 ವ್ಯಕ್ತಿಗಳ ಶೇರು ಸದಸ್ಯತ್ವ ಕಡಿಮೆ ಆಗಿದ್ದು, ಅದರಲ್ಲಿ 60 ವ್ಯಕ್ತಿಗಳು ಮೃತರಾದವರಾಗಿದ್ದಾರೆ. ಆದ್ದರಿಂದ ವರದಿ ವರ್ಷಾಂತ್ಯಕ್ಕೆ 3284 ಶೇರು ಸದಸ್ಯರು ಸಂಘದಲ್ಲಿರುತ್ತಾರೆ. ಶೇರು ಸದಸ್ಯರ ಕುಟುಂಬದ ಅರ್ಹ ವ್ಯಕ್ತಿಗಳಿಂದ ಅರ್ಜಿ ಬಂದಲ್ಲಿ ಸಂಘದ ಉಪನಿಯಮ ರೀತ್ಯಾ ಸಹಸದಸ್ಯತ್ವವನ್ನು ನೀಡಲಾಗುತ್ತಿದೆ. ವರದಿ ವರ್ಷಾರಂಭದಲ್ಲಿ ಸಂಘದಲ್ಲಿ 382 ಸಹಸದಸ್ಯರು ಇದ್ದು, ಪ್ರಸಕ್ತ ಸಾಲಿನಲ್ಲಿ 87 ವ್ಯಕ್ತಿಗಳು ಸಹಸದಸ್ಯರಾಗಿ ಸೇರ್ಪಡೆಯಾಗಿರುತ್ತಾರೆ. ಅದರಂತೆ ವಿವಿಧ ಕಾರಣಗಳಿಗಾಗಿ 4 ಸಹಸದಸ್ಯರ ಸದಸ್ಯತ್ವ ಕಡಿಮೆ ಆಗಿದ್ದು, ವರ್ಷಾಂತ್ಯಕ್ಕೆ 465 ಸಹಸದಸ್ಯರು ಸಂಘದಲ್ಲಿರುತ್ತಾರೆ. ಅಂತೆಯೇ ಸಂಘಕ್ಕೆ 187 ನಾಮಮಾತ್ರ ಸದಸ್ಯರು ವರದಿ ಸಾಲಿನಲ್ಲಿ ಸೇರ್ಪಡೆಗೊಂಡಿರುತ್ತಾರೆ.

### 2. ಸದಸ್ಯರ ಶೇರು :

ಸದಸ್ಯರಿಂದ ಸಂಘವು ಅಂತೂ ಸಂಗ್ರಹಿಸಬಹುದಾದ ಅಧಿಕೃತ ಶೇರು ಭಂಡವಾಳದ ಮಿತಿ ರೂ.8,00,00,000.00 ಇರುತ್ತದೆ. ವರದಿ ವರ್ಷದ ಆರಂಭದಲ್ಲಿ ರೂ.5,59,52,000.00 ಶೇರು ರಖಮು ಇದ್ದು, ಪ್ರಸಕ್ತ ಸಾಲಿನಲ್ಲಿ ರೂ.67,27,000.00 ಜಮಾ ಬಂದಿದ್ದು, ರೂ.16,87,400.00 ರಖಮು ಪರತ್ ಆಗಿದೆ. ಕಾರಣ 31-03-2020 ಕ್ಕೆ 6,09,91,600.00 ಶೇರು ರಖಮು ಜಮಾ ಇರುತ್ತದೆ. ಕೃಷಿ ಸಾಲಕ್ಕೆ ಸಂಬಂಧಿಸಿ ನಿಯಮರೀತ್ಯಾ ಸಾಲದ ಶೇ.10ರಷ್ಟು ರಖಮನ್ನು ಸಂಘದಲ್ಲಿ ಶೇರು ರೂಪದಲ್ಲಿ ಸಾಲ ಪಡೆಯುವಾಗ ರೈತರು ತೊಡಗಿಸಬೇಕಾಗುತ್ತದೆ. ಅದರಂತೆ ಸಂಘವೂ ಸಹ ತಾನು ಪಡೆಯುವ ಕೃಷಿ ಸಾಲಕ್ಕೆ ಅನುಗುಣವಾಗಿ ಶೇ. 5ರಂತೆ ಶೇರು ರಖಮನ್ನು ಜಿಲ್ಲಾ ಮಧ್ಯವರ್ತಿ ಬ್ಯಾಂಕಿನಿಂದ ಖರೀದಿಸಬೇಕಾಗಿರುತ್ತದೆ. ಕಾರಣ ಸಾಲ ಪಡೆಯುವ ಸದಸ್ಯರು ತಮ್ಮ ಸಾಲಕ್ಕೆ ಅನುಗುಣವಾಗಿ ಸಂಘದ ಶೇರಿನಲ್ಲಿ ಹಣ ತೊಡಗಿಸಿ ವ್ಯವಹರಿಸುವುದರ ಮೂಲಕ ಸಹಕಾರ ನೀಡಬೇಕಾಗಿ ವಿನಂತಿ. ವರದಿ ಸಾಲಿನಲ್ಲಿ ಸದಸ್ಯರ ಶೇರು ಶೇ.9ರ ಪ್ರಮಾಣದಲ್ಲಿ ಏರಿಕೆ ಆಗಿದೆ.

### 3. ನಿಧಿಗಳು :

ಸಂಘವು ವರ್ಷದಿಂದ ವರ್ಷಕ್ಕೆ ನಿಧಿಗಳ ಶೇಖರಣೆಯಲ್ಲಿ ಗಮನಾರ್ಹ ಪ್ರಗತಿ ಸಾಧಿಸುತ್ತಿದ್ದು, ವರದಿ ವರ್ಷದ ಆರಂಭದಲ್ಲಿ ಅಂತೂ ನಿಧಿಗಳು ರೂ. 7,30,41,840.84 ಜಮಾ ಇರುತ್ತಿದ್ದು ವರದಿ ಸಾಲಿನಲ್ಲಿ ರೂ. 94,83,452.53 ರಖಮು ನಿಧಿಗಳ ಬಾಬ್ತಿಗೆ ಶೇಖರಣೆ ಆಗಿರುತ್ತದೆ. ಈ ಪೈಕಿ ಮುಖ್ಯವಾಗಿ ಕಾಯ್ದಿಟ್ಟ ನಿಧಿಗೆ ರೂ.23,74,718.00 ಜಮಾ ಆಗಿರುತ್ತದೆ. ಹಾಗೂ ಕಟ್ಟಡ ನಿಧಿಗೆ 29,45,041.00 ಮತ್ತು ಕೃಷಿ ಪತ್ತಿನ ಸ್ಥಿರೀಕರಣ ನಿಧಿಗೆ ರೂ. 1,00,000.00 ಜಮಾ ಬಂದಿದ್ದು ಕಾಯ್ದಿಟ್ಟ ನಿಧಿ ಠೇವನ್ನು ಜಿಲ್ಲಾ ಮಧ್ಯವರ್ತಿ ಬ್ಯಾಂಕಿನಲ್ಲಿ ಗುಂತಾಯಿಸಲಾಗಿದೆ. ಕೃಷಿ ಪತ್ತಿನ ಸ್ಥಿರೀಕರಣ ನಿಧಿ ರಖಂಅನ್ನು ಅವಧಿ ಠೇವಿನಲ್ಲಿ ಗುಂತಾಯಿಸಲಾಗಿದೆ. ವರದಿ ವರ್ಷದಲ್ಲಿ ಶೇ.9ರ ಪ್ರಮಾಣದಲ್ಲಿ ನಿಧಿಗಳ ಶೇಖರಣೆಯಲ್ಲಿ ಏರಿಕೆ ಆಗಿದೆ.

### 4. ಬ್ಯಾಂಕಿನಿಂದ ಪಡೆದ ಸಾಲ :

ಸದಸ್ಯರಿಗೆ ಬಡ್ಡಿ ರಿಯಾಯತಿಗೊಳಪಡುವ ವಿವಿಧ ಅಲ್ಪಾವಧಿ ಮತ್ತು ಮಧ್ಯಮಾವಧಿ ಕೃಷಿ ಸಾಲಗಳನ್ನು ಜಿಲ್ಲಾ ಮಧ್ಯವರ್ತಿ ಬ್ಯಾಂಕಿನಿಂದ ಕ್ರಮಿಕ ಪತ್ತು ಹಾಗೂ ಸಾಲ ಮಂಜೂರಿ ಪಡೆದು ಹಾಗೂ ಕೆಲವು ಸಂದರ್ಭಗಳಲ್ಲಿ ಸ್ವಂತ ಬಂಡವಾಳದಿಂದಲೂ ನೀಡಲಾಗುತ್ತಿದೆ. ಸಂಘವು ಕಿಸಾನ್ ಕ್ರೆಡಿಟ್

ಕಾರ್ಡ್ ಸಾಲ (ಬೆಳೆಸಾಲ)ವನ್ನು ಸದಸ್ಯರಿಗೆ ಸಕಾಲಿಕವಾಗಿ ಒದಗಿಸುತ್ತಿದೆ. ಕಳೆದ ಸಾಲಿನಲ್ಲಿ ಅಂದರೆ ಸನ್ 2018–19ನೇ ಹಣಕಾಸು ವರ್ಷದಲ್ಲಿ 2255 ವ್ಯಕ್ತಿಗಳಿಗೆ ರೂ. 30,62,72,677.00 ಮೊತ್ತದ ಸಾಲವನ್ನು ನೀಡಿದ್ದು ವರದಿ ವರ್ಷದಲ್ಲಿ 2255 ವ್ಯಕ್ತಿಗಳಿಂದ ರೂ.30,62,72,677.00 ರಖಮು ವಸೂಲಿ ಆಗಿದ್ದು ಅರ್ಥಾತ್ ಶೇ.100 ಪ್ರಮಾಣದಲ್ಲಿ ಸಾಲ ವಸೂಲಿಯಾಗಿದೆ. ವರದಿ ಸಾಲಿನಲ್ಲಿ 2346 ವ್ಯಕ್ತಿಗಳಿಗೆ ರೂ. 32,88,46,679.00 ರಖಮು ಸಾಲ ನೀಡಲಾಗಿದೆ. ವರದಿ ವರ್ಷಾಂತ್ಯಕ್ಕೆ ಜಿಲ್ಲಾ ಮಧ್ಯವರ್ತಿ ಬ್ಯಾಂಕಿನಿಂದ ಪಡೆದ ಅಲ್ಪಾವಧಿ ಮತ್ತು ಮಧ್ಯಮಾವಧಿ ಕೃಷಿ ಸಾಲ ರೂ.40,01,91,720.00 ಇರುತ್ತದೆ. ಕೇಂದ್ರ, ರಾಜ್ಯ ಸರಕಾರಗಳು ರೈತರಿಗೆ ಅನುಕೂಲವಾಗಲೆಂದು, ಕೃಷಿ ಸಾಲಗಳಿಗೆ ಬಡ್ಡಿ ರಿಯಾಯಿತಿ ನೀಡುತ್ತಿದ್ದು, ಅದನ್ನು ಸಂಘವು ಜಿಲ್ಲಾ ಮಧ್ಯವರ್ತಿ ಬ್ಯಾಂಕಿನ ಸಹಯೋಗ, ಸಹಕಾರದೊಂದಿಗೆ ಅನುಷ್ಠಾನಗೊಳಿಸುತ್ತಿದೆ. ಮಾನ್ಯ ಸದಸ್ಯರು ಇದರ ಸಂಪೂರ್ಣ ಪ್ರಯೋಜನ ಪಡೆದು ಆರ್ಥಿಕವಾಗಿ ಸಬಲರಾಗಬೇಕೆಂಬುದು ನಮ್ಮ ಆಶಯವಾಗಿದೆ.

### 5. ಸದಸ್ಯರ ಠೇವುಗಳು:

ವರದಿ ವರ್ಷದ ಆರಂಭದಲ್ಲಿ ಸದಸ್ಯರ ಅಂತೂ ಠೇವುಗಳು ರೂ.31,64,63,264.03 ಜಮಾ ಇದೆ. ಸಂಘದಲ್ಲಿ ನಿಶ್ಚಿತ ಅವಧಿಯ ಠೇವುಗಳು, ಆವರ್ತಕ ಠೇವು ಹಾಗೂ ಉಳಿತಾಯ ಖಾತೆ ಠೇವು ಹೀಗೆ ವಿವಿಧ ಬಗೆಯ ಠೇವುಗಳನ್ನು ಆಕರ್ಷಕ ಬಡ್ಡಿದರದಲ್ಲಿ ಸ್ವೀಕರಿಸಲಾಗುತ್ತಿದೆ. ದಿ:31–03–2020ಕ್ಕೆ ಇದ್ದಂತೆ ಅಂತೂ ಠೇವಣಿಗಳು ರೂ.39,22,77,671.73 ಇರುತ್ತಿದ್ದು, ವರದಿ ಸಾಲಿನಲ್ಲಿ ರೂ. 7,58,14,407.70 ಹೆಚ್ಚಳವಾಗಿದ್ದು ಅರ್ಥಾತ್ ಶೇ.23.95 ರ ಪ್ರಮಾಣದಲ್ಲಿ ಅಂತೂ ಠೇವುಗಳ ಮೊತ್ತ ಏರಿಕೆಯಾಗಿರುವುದು ಸಂಘದ ಮೇಲೆ ಸದಸ್ಯರಿಗಿರುವ ನಂಬಿಕೆ–ವಿಶ್ವಾಸಕ್ಕೆ ಇದು ನಿದರ್ಶನವಾಗಿದೆ.

### 6. ದುಡಿಯುವ ಬಂಡವಾಳ :

ಸಂಘದ ವ್ಯವಹಾರ ವರ್ಷದಿಂದ ವರ್ಷಕ್ಕೆ ಗಮನಾರ್ಹ ಪ್ರಮಾಣದಲ್ಲಿ ಹೆಚ್ಚಳವಾಗುತ್ತಿರುವುದು ತಮಗೆಲ್ಲ ತಿಳಿದಿರುವ ವಿಷಯವಾಗಿದೆ. ಶೇರು ಬಂಡವಾಳ ಸ್ವೀಕಾರ, ನಿಧಿಗಳ ಶೇಖರಣೆ, ಸದಸ್ಯರಿಂದ ಠೇವು ಸಂಗ್ರಹಣೆ ಹೀಗೆ ಎಲ್ಲಾ ವಿಭಾಗಗಳಲ್ಲೂ ಪ್ರಗತಿಯನ್ನು ದಾಖಲಿಸುತ್ತಿದೆ. ವರದಿ ವರ್ಷದಲ್ಲಿ ದುಡಿಯುವ ಬಂಡವಾಳದಲ್ಲಿಯೂ ಸಹ ಹೆಚ್ಚಳವಾಗಿದ್ದು ದಿ: 31–03–2020 ಕ್ಕೆ ರೂ. 95,04,93,692.73 ಇರುತ್ತದೆ. ವರದಿ ಸಾಲಿನ ಅಂತ್ಯಕ್ಕೆ ದುಡಿಯುವ ಭಂಡವಾಳವು ಶೇ.19.10ರ ಪ್ರಮಾಣದಲ್ಲಿ ಏರಿಕೆಯಾಗಿದೆ.

### 7. ಸದಸ್ಯರ ಸಾಲಗಳು :

ಸದಸ್ಯರುಗಳಿಗೆ ಕೃಷಿ ಮತ್ತು ಕೃಷಿ ಪೂರಕ ಉದ್ದೇಶಗಳಿಗೆ ವಿವಿಧ ಸಾಲಗಳನ್ನು ಸಂಘದಿಂದ ನೀಡಲಾಗುತ್ತಿದೆ. ವರದಿ ವರ್ಷದ ಪ್ರಾರಂಭದಲ್ಲಿ ಸದಸ್ಯರಿಗೆ ನೀಡಿದ ಅಂತೂ ಸಾಲ ರೂ. 57,34,47,256.00 ಇದ್ದು ವರ್ಷಾಂತ್ಯಕ್ಕೆ ರೂ.61,32,36,260.00 ಆಗಿದೆ. ಅಂದರೆ ವರದಿ ಸಾಲಿನ ಅಂತ್ಯಕ್ಕೆ ಸದಸ್ಯರಿಗೆ ನೀಡಿದ ಸಾಲದಲ್ಲಿ ರೂ.3,97,89,004.00 ಹೆಚ್ಚಳವಾಗಿದೆ. ಈಗಾಗಲೇ ಹೇಳಿದಂತೆ, ಸರಕಾರಗಳು ನೀಡುತ್ತಿರುವ ಬಡ್ಡಿ ರಿಯಾಯಿತಿ ಹಾಗೂ ಬಡ್ಡಿ ಪ್ರೋತ್ಸಾಹನ ಯೋಜನೆಗಳ ಸಂಪೂರ್ಣ ಪ್ರಯೋಜನವನ್ನು ಸದಸ್ಯರು ಪಡೆದು ತನ್ಮೂಲಕ ಆರ್ಥಿಕ ಉನ್ನತಿ ಸಾಧಿಸಬೇಕೆನ್ನುವ ಏಕಮೇವ ಉದ್ದೇಶದಿಂದ ನಾವುಗಳು ಕಾರ್ಯನಿರ್ವಹಿಸುತ್ತಿದ್ದು ಮಾನ್ಯ ಸದಸ್ಯರು ಇದನ್ನು ಗಮನಿಸಿ ಶಿಸ್ತುಪಾಲನೆಯ ಹಾದಿಯಲ್ಲಿ ಸಾಗಿ ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತೇವೆ.

### ಸದಸ್ಯರ ಸಾಲದ ವ್ಯವಹಾರದ ಸಂಕ್ಷಿಪ್ತ ಮಾಹಿತಿ (ರಖಮು ರೂ.ಗಳಲ್ಲಿ)

| ಅ. ನಂ. | ಸಾಲದ ವಿವರ | ವರ್ಷಾರಂಭದಲ್ಲಿ ಬಾಕಿ ಇದ್ದ ಅಂತೂ ಸಾಲ (01–04–2019ಕ್ಕೆ) | ಈ ವರ್ಷದಲ್ಲಿ ಪೂರೈಸಿದ ಸಾಲ | ಈ ವರ್ಷದಲ್ಲಿ ಮರುಪಾವತಿ ಆದ ಸಾಲ | ವರ್ಷಾಂತ್ಯಕ್ಕೆ ಬಾಕಿ ಇರುವ ಆಯಾ ಸಾಲ (31–03–2020ಕ್ಕೆ) |
|---|---|---|---|---|---|
| 1 | ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲ(ಜಿ/ಹಿ) | 25,57,91,326 | 28,90,64,079 | 25,71,84,060 | 28,76,71,345 |
| 2 | ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲ(ಸಾ./ಹಿ.) | 5,00,96,000 | 3,97,82,600 | 5,00,96,000 | 3,97,82,600 |
| 3 | ಕೃಷಿ ಮಾಧ್ಯಮಿಕ ಸಾಲ (ಜಿ.ಹಿ) | 11,62,14,036 | 3,20,92,800 | 3,37,53,473 | 11,45,53,363 |
| 4 | ಕೃಷಿ ಮಾಧ್ಯಮಿಕ ಸಾಲ (ಸಾ.ಹಿ) | 2,67,07,192 | 59,69,600 | 84,76,674 | 2,42,00,118 |
| 5 | ಕೃಷಿಯೇತರ ಮಾಧ್ಯಮಿಕ ಸಾಲ (ಜಿ.ಹಿ) | 2,38,67,615 | 1,69,10,000 | 79,71,720 | 3,28,05,895 |
| 6 | ಕೃಷಿಯೇತರ ಮಾಧ್ಯಮಿಕ ಸಾಲ (ಸಾ.ಹಿ) | 25,53,480 | 14,25,000 | 16,33,480 | 23,45,000 |
| 7 | ಅಲ್ಪಾವಧಿ ಕೃಷಿ ಅಭಿವೃದ್ಧಿ ಸಾಲ | 7,04,91,794 | 14,66,37,440 | 13,57,50,578 | 8,13,78,656 |
| 8 | ವಾಹನ ಮತ್ತು ಗೃಹಬಳಕೆ ಸಾಲ | 97,67,748 | 1,22,97,060 | 51,23,958 | 1,69,40,850 |
| 9 | ಬಂಗಾರ ದಾಗಿನೆ ಸಾಲ | 89,26,031 | 88,73,700 | 1,01,22,868 | 76,76,863 |
| 10 | ಮಾಲವತ್ತಿ ಸಾಲ | 43,38,355 | 2,06,89,900 | 2,26,84,755 | 23,43,500 |
| 11 | ಮುದ್ದತಿ ಠೇವು ಸಾಲ | 18,50,680 | 67,76,100 | 72,32,100 | 13,94,680 |
| 12 | ಭಾಗ್ಯಲಕ್ಷ್ಮಿ ಠೇವು ಸಾಲ | 28,42,999 | 75,53,300 | 82,52,909 | 21,43,390 |
| | **ಅಂತೂ** | **57,34,47,256** | **58,80,71,579** | **54,82,82,575** | **61,32,36,260** |

**8. ಸಾಲ ವಸೂಲಿ ಮತ್ತು ಸುಸ್ತಿ ಸಾಲ ಬಾಕಿ :**

ಪಡೆದ ಸಾಲವನ್ನು ಸಕಾಲಿಕವಾಗಿ ಮರುಪಾವತಿಸುವ ಬಗ್ಗೆ ಮಾನ್ಯ ಸದಸ್ಯರು ಈ ಮೊದಲಿನ ವರ್ಷಗಳಿಗಿಂತಲೂ ಹೆಚ್ಚಿನ ಮುತುವರ್ಜಿ ವಹಿಸುತ್ತಿರುವುದು ಉಲ್ಲೇಖಾರ್ಹ ವಿಷಯವಾಗಿದೆ. ಕೃಷಿ ಸಾಲಗಳಿಗೆ ಸರಕಾರವು ವಿವಿಧ ಸವಲತ್ತು-ಸೌಲಭ್ಯಗಳನ್ನು ಸಾಲ ಪಡೆದ ಆಧಾರದಲ್ಲಿ ನೀಡದೇ ನಿಗದಿತ ವಾಯಿದೆ ದಿನಾಂಕದೊಳಗೆ ಮರುಪಾವತಿಸಿದ್ದನ್ನು ಆಧರಿಸಿ ನೀಡುತ್ತಿದೆ. ಹೀಗಾಗಿ ಸಕಾಲಿಕವಾಗಿ ಸಾಲ ತೀರುವಳಿ ಮಾಡುವ ಸದಸ್ಯರಿಗೆ ಮಾತ್ರ ಬಡ್ಡಿ ರಿಯಾಯಿತಿಯ ಯೋಜನೆಯ ಲಾಭ ಲಭ್ಯವಾಗುವುದರಿಂದ ಸದಸ್ಯರಲ್ಲಿ ಉಂಟಾಗಿರುವ ಈ ಜಾಗೃತಿ, ಸಂಘ ಹಾಗೂ ಸದಸ್ಯರ ಇಬ್ಬರ ಹಿತದೃಷ್ಟಿಯಿಂದಲೂ ಒಳ್ಳೆಯ ಬೆಳವಣಿಗೆ. ವರದಿ ಸಾಲಿನ ಅಂತ್ಯಕ್ಕೆ ಸುಸ್ತಿ ಸಾಲ ಇರುವುದಿಲ್ಲ. ಅಂತೂ ಸಾಲ ರೂ.61,32,36,260.00 ಇದ್ದು ಸಾಲ ವಸೂಲಿ ಪ್ರಮಾಣ ಶೇ.100 ರಷ್ಟಾಗಿ ಪ್ರಗತಿ ಸಾಧಿಸಿರುತ್ತದೆ. ಸತತ ಮೂರು ವರ್ಷಗಳಿಂದ ಸಾಲ ವಸೂಲಿಯಲ್ಲಿ ಶೇ.100 ಪ್ರಗತಿ ಸಾಧಿಸಲು ಕಾರಣರಾದ ಮಾನ್ಯ ಸದಸ್ಯರಿಗೆ ಅಭಿನಂದನೆಗಳು.

ವರದಿ ಸಾಲಿನಲ್ಲಿ ಸದಸ್ಯರ ಸಾಲದ ವಸೂಲಿ ಬೇಡಿಕೆ, ಮರುಪಾವತಿ, ಕಟ್ಟಬಾಕಿ ಹಾಗೂ ಶೇಕಡಾವಾರು ವಸೂಲಿ ಮಾಹಿತಿಗಳ ವಿವರ ಈ ಕೆಳಗಿನಂತಿದೆ.

**(ದಿನಾಂಕ 01-04-2019 ರಿಂದ 31-03-2020ರವರೆಗೆ)**

| ಅ. ನಂ. | ಸಾಲಗಳ ವಿವರ | ಅಂತೂ ತಗಾದೆ ರೂ.ಗಳಲ್ಲಿ | ತಗಾದೆ ಪೈಕಿ ಮರುಪಾವತಿ ರೂ.ಗಳಲ್ಲಿ | ಮರುಪಾವತಿ ಆಗದಿರುವ ಸಾಲ (ಕಟ್ಟಬಾಕಿ) | ವಸೂಲಿ ಪ್ರಮಾಣ(%) | ಕಟ್ಟಬಾಕಿ ಪ್ರಮಾಣ(%) |
|---|---|---|---|---|---|---|
| 1 | ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲ(ಚಿ/ಹಿ) | 25,57,91,326 | 25,57,91,326 | 0 | **100.00** | 0.00 |
| 2 | ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲ(ಸಾ./ಹಿ.) | 5,00,96,000 | 5,00,96,000 | 0 | **100.00** | 0.00 |
| 3 | ಕೃಷಿ ಮಾಧ್ಯಮಿಕ ಸಾಲ (ಚಿ.ಹಿ) | 3,06,85,478 | 3,06,85,478 | 0 | **100.00** | 0.00 |
| 4 | ಕೃಷಿ ಮಾಧ್ಯಮಿಕ ಸಾಲ (ಸಾ.ಹಿ) | 73,22,174 | 73,22,174 | 0 | **100.00** | 0.00 |
| 5 | ಕೃಷಿಯೇತರ ಮಾಧ್ಯಮಿಕ ಸಾಲ (ಚಿ.ಹಿ) | 35,39,125 | 35,39,125 | 0 | **100.00** | 0.00 |
| 6 | ಕೃಷಿಯೇತರ ಮಾಧ್ಯಮಿಕ ಸಾಲ (ಸಾ.ಹಿ) | 2,26,605 | 2,26,605 | 0 | **100.00** | 0.00 |
| 7 | ಅಲ್ಪಾವಧಿ ಕೃಷಿ ಅಭಿವೃದ್ಧಿ ಸಾಲ | 10,93,22,144 | 10,93,22,144 | 0 | **100.00** | 0.00 |
| 8 | ವಾಹನ ಮತ್ತು ಗೃಹಬಳಕೆ ಸಾಲ | 35,36,051 | 35,36,051 | 0 | **100.00** | 0.00 |
| 9 | ಬಂಗಾರ ದಾಗಿನೆ ಸಾಲ | 66,60,291 | 66,60,291 | 0 | **100.00** | 0.00 |
| 10 | ಮಾಲವತ್ತಿ ಸಾಲ | 1,83,51,455 | 1,83,51,455 | 0 | **100.00** | 0.00 |
| 11 | ಮುದ್ದತಿ ಠೇವು ಸಾಲ | 44,60,200 | 44,60,200 | 0 | **100.00** | 0.00 |
| 12 | ಭಾಗ್ಯಲಕ್ಷ್ಮಿ ಠೇವು ಸಾಲ | 24,07,093 | 24,07,093 | 0 | **100.00** | 0.00 |
| | **ಅಂತೂ** | **49,23,97,942** | **49,23,97,942** | **0** | **100.00** | **0.00** |

**9. ಹೂಡಿಕೆ :**

ಸಂಘದ ಹೆಚ್ಚುವರಿ ಉಳಿತಾಯಗಳನ್ನು ವಿವಿಧ ಸಹಕಾರಿ ಬ್ಯಾಂಕ್/ಸಂಘಗಳ ಶೇರಿನಲ್ಲಿ ಮತ್ತು ನಿಶ್ಚಿತ ಅವಧಿಯ ಠೇವಣಿಗಳಲ್ಲಿ ತೊಡಗಿಸಲಾಗಿದೆ. ಅವುಗಳ ಕ್ರೋಢೀಕೃತ ಮಾಹಿತಿಯ ಸಂಕ್ಷಿಪ್ತ ವರದಿ ವರ್ಷಾಂತ್ಯಕ್ಕೆ ಇದ್ದಂತೆ ಈ ಕೆಳಗಿನಂತಿದೆ.

(ಅ) ಶೇರುಗಳಲ್ಲಿ: ದಿ: 31-03-2020ಕ್ಕೆ ಸಂಘವು ರೂ.1,81,11,100.00 ಮೊತ್ತದ ಸಹಕಾರಿ ಸಂಘಗಳ ಶೇರುಗಳನ್ನು ಹೊಂದಿದೆ.

ಆ ಪೈಕಿ ರೂ. 1,80,00,000.00ನ್ನು ಜಿಲ್ಲಾ ಮಧ್ಯವರ್ತಿ ಬ್ಯಾಂಕಿನ ಶೇರಿನಲ್ಲಿ ತೊಡಗಿಸಲಾಗಿದೆ.

(ಬ) ನಿಶ್ಚಿತ ಅವಧಿಯ ಠೇವಣಿಗಳಲ್ಲಿ : ನಿಯಮಾನುಸಾರ ಕಾಯ್ದಿಟ್ಟ ನಿಧಿ ಠೇವಣಿ ರೂ.2,30,16,000.00 ಮತ್ತು ಕೃಷಿ ಪತ್ತಿನ ಸ್ಥಿರೀಕರಣ ನಿಧಿ ಠೇವಣಿ ರೂ. 1,64,00,000.00 ಮತ್ತು ಉಳಿದ ಹೆಚ್ಚುವರಿ ಬಂಡವಾಳ ಪೈಕಿ ರೂ.20,50,01,000.00 ರಖಮನ್ನು ಕೆಡಿಸಿಸಿ ಬ್ಯಾಂಕಿನಲ್ಲಿ, ರೂ.1,00,000.00 ರಖಮನ್ನು ಕೆನರಾ ಬ್ಯಾಂಕಿನಲ್ಲಿ ಮತ್ತು ರೂ. 4,27,44,626.00 ರಖಮನ್ನು ಟಿಎಸ್‌ಎಸ್ ಲಿ., ಶಿರಸಿಯಲ್ಲಿ ಮುದ್ದತು ಠೇವಣಿಯಾಗಿ ಹೂಡಿಕೆ ಮಾಡಲಾಗಿದೆ.

**10. ಬಡ್ಡಿ ಆದಾಯ ಹಾಗೂ ಲಾಭ :**

ಸಂಘವು ಪತ್ತಿನ ವ್ಯವಹಾರ ಮಾತ್ರ ನಡೆಸುತ್ತಿರುವುದರಿಂದ ವರದಿ ಸಾಲಿನಲ್ಲಿ ಸಾಲಗಳ ಮೇಲಿನ ಬಡ್ಡಿ ವಸೂಲಿ ಮತ್ತು ಹೂಡಿಕೆಗಳಿಂದ ಬಂದ ಬಡ್ಡಿಗಳಿಕೆ ಮಾತ್ರ ಮುಖ್ಯ ಆದಾಯದ ಮೂಲಗಳಾಗಿರುತ್ತದೆ. ಸಂಘವು ವರದಿ ಸಾಲಿನಲ್ಲಿ ಗಳಿಸಿದ ಅಂತೂ ಆದಾಯದಲ್ಲಿ ನಿಯಮಾನುಸಾರ ಖರ್ಚು ಮತ್ತು ಅನುವು ಹಾಗೂ ಮುನ್ನೇರ್ಪಾಡು ಬಾಬ್ತುಗಳನ್ನು ಕಳೆಯಲಾಗಿ, ವರ್ಷಾಂತ್ಯಕ್ಕೆ ಸಂಘವು ರೂ. 73,58,509.99 ನಿಕ್ಕಿ ಲಾಭಗಳಿಸಿರುತ್ತದೆ. ಸಂಘದ ದುಡಿಯುವ ಬಂಡವಾಳಕ್ಕೆ ಪರಿಗಣಿಸಿದಾಗ ಪ್ರತಿ 100 ರೂಪಾಯಿಗೆ ರೂ. 1.49 ಲಾಭ ಗಳಿಸಿರುತ್ತದೆ.

## 11. ಸನ್ 2019-20ನೇ ಸಾಲಿನ ಲಾಭ ವಿಭಾಗಣೆ :

ಸನ್ 2019-20ರಲ್ಲಿ ಸಂಘವು ಗಳಿಸಿದ ನಿಕ್ಕಿ ಲಾಭ ರೂ.73,45,714.99ನ್ನು ಈ ಕೆಳಗಿನಂತೆ ವಿಭಾಗಣೆ ಮಾಡಲು ಸಂಘದ ಆಡಳಿತ ಮಂಡಳಿಯವರು ಸರ್ವಸಾಧಾರಣ ಸಭೆಗೆ ಶಿಫಾರಸ್ಸು ಮಾಡಿರುತ್ತಾರೆ.

| ನಿಧಿಗಳು | ಶೇಕಡಾವಾರು | ಸೂಚಿತ ಲಾಭ ವಿಭಾಗಣೆ | ಲಾಭದಲ್ಲಿ ಬಾಕಿ ಉಳಿಯುವ ರಖಂ |
|---|---|---|---|
| ನಿಕ್ಕಿ ಲಾಭ | | | 73,45,714.99 |
| ರಿಝರ್ವ ಫಂಡ್ | 25 | 18,36,429.00 | 55,09,285.99 |
| ಸಹಕಾರ ಶಿಕ್ಷಣ ನಿಧಿ | 2 | 1,10,186.00 | 53,99,099.99 |
| ಕಟ್ಟಡ ನಿಧಿ | 10 | 7,34,571.00 | 46,64,528.99 |
| ಬುಡತಿ ಸಾಲದ ನಿಧಿ | 5 | 3,67,286.00 | 42,97,242.99 |
| ನೌಕರರ ಬೋನಸ್ಸು | 2month | 6,72,228.00 | 36,25,014.99 |
| ಧರ್ಮಾರ್ಥ ನಿಧಿ | 10 | 3,62,502.00 | 32,62,512.99 |
| ಪ್ರಚಾರ ನಿಧಿ | 5 | 1,63,126.00 | 30,99,386.99 |
| ತೋಟಗಾರರ ಕಲ್ಯಾಣ ನಿಧಿ | 5 | 1,54,969.00 | 29,44,417.99 |
| ಲಾಭಾಂಶ | 5 | 29,24,552.00 | 19,865.99 |
| ರಿಝರ್ವ ಫಂಡ್ (ಹಂಚಿಕೆ ಆಗದೇ ಇರುವ ಲಾಭ) | | 19,865.99 | ---- |
| | | 73,45,714.99 | |

## 12. ಪತ್ತು ಮತ್ತು ಮಾರಾಟ ಜೋಡಣೆ :

ಸದಸ್ಯರು ನಮ್ಮ ಸಂಘದ ಮುಖಾಂತರ ಮಾರಾಟ ಸಹಕಾರ ಸಂಘಗಳಲ್ಲಿ ವರದಿ ವರ್ಷದಲ್ಲಿ 8257.55 ಕ್ವಿಂಟಲ್ ಮಹಸೂಲು ಬಾಬ್ತು ರೂ.19,36,68,904.00ನ್ನು ವಿಕ್ರಿಯಿಸಿರುತ್ತಾರೆ. ವರದಿ ವರ್ಷದ ಕೊನೆಗೆ 437.21 ಕ್ವಿಂಟಲ್ ಮಹಸೂಲು ಶಿಲ್ಕು ಇರುತ್ತದೆ. ಇದಲ್ಲದೆ ನಮ್ಮ ಸಂಘದ ಬಹುತೇಕ ಸದಸ್ಯರು ದಿ ತೋಟಗಾರ್ಸ್ ಕೋ-ಆಪ್. ಸೇಲ್ ಸೊಸೈಟಿಯಲ್ಲಿ ನೇರವಾಗಿ ಮಹಸೂಲ ವಿಕ್ರಿ ಮಾಡಿ ಸಕಾಲದಲ್ಲಿ ಸಾಲ ಮರುಪಾವತಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ. ನಮ್ಮ ಸಂಘದ ಮುಖಾಂತರ ವಿಕ್ರಿ ಮಾಡಿದ ಸದಸ್ಯರಿಗೆ ವರದಿ ವರ್ಷದಲ್ಲಿ ರೂ.2,24,072.00ಬೋನಸ್ಸು ದೊರೆತಿದ್ದು, ಸಂಘಕ್ಕೆ ರೂ.5,87,788.00 ಸೇಲ್ಸ್ ರಿಬೇಟ್ ದೊರೆತಿರುತ್ತದೆ.

## 13. ಆಡಳಿತ ಮಂಡಳಿ ವ ಇತರ ಸಭೆ :

ವರದಿ ಸಾಲಿನಲ್ಲಿ 1 ವಾರ್ಷಿಕ ಸರ್ವ ಸಾಧಾರಣ ಸಭೆ, 16 ಆಡಳಿತ ಮಂಡಳಿಯ ಸಭೆಗಳು, 25 ಸಾಲದ ಉಪಸಮಿತಿ ಸಭೆಗಳು, 11 ಕಾರ್ಯಕಾರಿ ಸಮಿತಿ ಸಭೆಗಳು ನಡೆದಿರುತ್ತದೆ.

## 14. ಸಿಬ್ಬಂದಿ :

ವರದಿ ವರ್ಷಾಂತ್ಯಕ್ಕೆ ಸಂಘದಲ್ಲಿ 8 ಖಾಯಂ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಅಲ್ಲದೇ 13 ಗುತ್ತಿಗೆ ಸಿಬ್ಬಂದಿಗಳು ಮತ್ತು 1 ರಾತ್ರಿ ಪಾಳಿ ಭದ್ರತಾ ಸಿಬ್ಬಂದಿ ಕೆಲಸ ನಿರ್ವಹಿಸುತ್ತಿದ್ದಾರೆ. ಸಂಘದ ಸದಸ್ಯರ ಸಂಖ್ಯೆ ಹಾಗೂ ವ್ಯವಹಾರಗಳು ಗಣನೀಯವಾಗಿ ಹೆಚ್ಚಾಗಿದ್ದರೂ ನೌಕರ ವರ್ಗದವರು ತಾಳ್ಮೆಯಿಂದ ಸಮರ್ಥವಾಗಿ ದಕ್ಷತೆಯಿಂದ, ಸದಸ್ಯರೊಡನೆ ಉತ್ತಮ ಸಂಬಂಧವಿಟ್ಟು ಕಾರ್ಯನಿರ್ವಹಿಸುತ್ತಿದ್ದಾರೆ. ಸಂಘದ ಮುಖ್ಯಕಾರ್ಯನಿರ್ವಾಹಕ ಹುದ್ದೆಗೆ ಶ್ರೀ ರಮೇಶ ಎಂ. ಹೆಗಡೆ, ಬಾಳೆಗದ್ದೆ ಇವರನ್ನು ಟಿ.ಎಸ್.ಎಸ್.ಲಿ., ಶಿರಸಿ ಇವರಿಂದ ಎರವಲು ಪಡೆದು ಪ್ರಸಕ್ತವರ್ಷದಲ್ಲಿಯೂ ಮುಂದುವರೆಸಲಾಗಿದೆ.

## 15. ಇತರ ಚಟುವಟಿಕೆಗಳು :

ನಮ್ಮ ಟಿಆರ್‌ಸಿ ಸಂಪೂರ್ಣ ಗಣಕೀಕೃತವಾಗಿದ್ದು, ತನ್ನ ಸದಸ್ಯರ ಕೃಷಿ ಸಂಬಂಧಿತ ಹಣಕಾಸಿನ ಸಮಸ್ಯೆ, ಅವಶ್ಯಕತೆಗಳಿಗೆ ಪರಿಹಾರ ಒದಗಿಸುವ ಕಾರ್ಯದಲ್ಲಿ ನಿರತವಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಉತ್ತಮ ಸಹಕಾರಿ ಸಂಸ್ಥೆಗಳಲ್ಲೊಂದಾಗಿದೆ ಎಂದು ಹೇಳಿಕೊಳ್ಳಲು ನಮಗೆ ಅತ್ಯಂತ ಹೆಮ್ಮೆ ಎನಿಸುತ್ತದೆ. ಸಂಘವು ನಡೆಸುತ್ತಿರುವ ಪತ್ತೇತರ ಚಟುವಟಿಕೆಗಳು ಈ ಕೆಳಗಿನಂತಿವೆ.

### 1. ಬೆಳೆವಿಮೆ:

ಪ್ರಸಕ್ತ ಸಾಲಿನಲ್ಲಿ ಸದಸ್ಯರಿಂದ ಅಡಿಕೆ ಬೆಳೆ ವಿಮೆ ರೂ.84,65,083.00ಹಾಗೂ ಭತ್ತದ ಬೆಳೆ ವಿಮೆ 4,46,145.00 ಒಟ್ಟೂ ರೂ. 89,11,228.00 ಬೆಳೆ ವಿಮಾ ಪ್ರೀಮಿಯಂ ಜಮಾ ಪಡೆದು ಬೆಳೆ ವಿಮಾ ಯೋಜನೆಗೆ ಪಾವತಿಸಲಾಗಿದೆ. ಸನ್ 18-19ನೇ ಸಾಲಿನಲ್ಲಿ ಸಂಘದ ಸದಸ್ಯರಿಂದ ಒಟ್ಟೂ ರೂ.87,22,500.00 ಬೆಳೆ ವಿಮಾ ಯೋಜನೆಗೆ ಪಾವತಿಸಿದ್ದು ಈ ಪೈಕಿ ಸುಮಾರು 6.34 ಕೋಟಿಗೂ ಹೆಚ್ಚಿನ ವಿಮಾ ಹಣ ಸದಸ್ಯರ ಖಾತೆಗೆ ಜಮಾ ಆಗಿದೆ.

### 2. ಸಂಜೀವಿನಿ ನಿಧಿ

31-03-2020 ರವರೆಗೆ ಸಂಜೀವಿನಿ ನಿಧಿಯಲ್ಲಿ ರೂ. 1,01,08,818.00.00 ಜಮಾ ಇರುತ್ತದೆ. ದಾನಿಗಳು ಈ ನಿಧಿಗೆ ಹೆಚ್ಚಿನ ಪ್ರಮಾಣದಲ್ಲಿ ದೇಣಿಗೆ ನೀಡುವುದರ ಮೂಲಕ ಆರ್ಥಿಕವಾಗಿ ನೊಂದ ಸದಸ್ಯರಿಗೆ ನೆರವಾಗುವ ನಮ್ಮ ಉದ್ದೇಶಕ್ಕೆ ಪೂರ್ಣ ಬೆಂಬಲ ನೀಡಬೇಕಾಗಿ ಕೋರಿಕೆ.

**3. ಕಟ್ಟಡ ನಿರ್ಮಾಣ :**

ವರದಿ ವರ್ಷದಲ್ಲಿ ನೂತನ ಕಚೇರಿ ಕಟ್ಟಡ ನಿರ್ಮಾಣ ಕಾರ್ಯ ಸಂಪೂರ್ಣಗೊಂಡು ದಿನಾಂಕ: 15-11-2019ರ ಸಂಕಷ್ಟ ಚತುರ್ಥಿಯ ಶುಭ ದಿನದಂದು ನೂತನ ಕಚೇರಿಯಲ್ಲಿ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಲಾಗಿದೆ.

**4. ಬ್ಯಾಂಕಿಂಗ್ ಸೌಲಭ್ಯ :**

ಸದಸ್ಯರಿಗೆ ಪರ ಸ್ಥಳದಿಂದ ಹಣ ಪಾವತಿಸಲು ಹಾಗೂ ಹಣ ಪಡೆಯಲು ಅನುಕೂಲವಾಗುಂತೆ **RTGS, NEFT** ಸೌಲಭ್ಯವನ್ನು ಒದಗಿಸುತ್ತಿದೆ. ಹಾಗೂ **ನೆಟ್ ಬ್ಯಾಂಕಿಂಗ್** ಸೌಲಭ್ಯವನ್ನು ಸಹ ಸಂಘದಲ್ಲಿ ಪ್ರಾರಂಭಿಸಲಾಗಿದೆ.

**5. ಭದ್ರತಾ ಕೋಶದ ವ್ಯವಸ್ಥೆ :**

ಸಂಘವು ಸದಸ್ಯರಿಗೆ ಕಡಿಮೆ ದರದಲ್ಲಿ ಭದ್ರತಾಕೋಶದ ವ್ಯವಸ್ಥೆಯನ್ನು ಕಲ್ಪಿಸಿದ್ದು ಹೆಚ್ಚಿನ ಸದಸ್ಯರು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ರಾತ್ರಿ ಕಾವಲಿಗಾಗಿ ಸಿಬ್ಬಂದಿಯನ್ನು ನೇಮಿಸಿದ್ದು, ಸಂಘದ ನವೀಕೃತ ಕಟ್ಟಡದಲ್ಲಿಯೂ ಸಹ ಸಿಸಿ ಕ್ಯಾಮರಾವನ್ನು ಅಳವಡಿಸಿ ಕಛೇರಿಗೆ ಗರಿಷ್ಠ ಭದ್ರತಾ ವ್ಯವಸ್ಥೆ ಮಾಡಲಾಗಿದೆ. ಭದ್ರತಾಕೋಶದ ವ್ಯವಸ್ಥೆ ಬಗ್ಗೆ ಬೇಡಿಕೆ ಹೆಚ್ಚುತ್ತಿದ್ದು, ಹೆಚ್ಚಿನ ಭದ್ರತಾಕೋಶದ ವ್ಯವಸ್ಥೆ ಅಳವಡಿಸಲು ತೀರ್ಮಾನಿಸಲಾಗಿದೆ. ಕಾರಣ ಸಂಘದ ಸದಸ್ಯರು ಇದರ ಪ್ರಯೋಜನ ಪಡೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇವೆ.

**6. ಉತ್ತಮ ಸದಸ್ಯ ಪ್ರಶಸ್ತಿ :**

ಸದಸ್ಯರ ಉತ್ತಮ ವ್ಯವಹಾರವನ್ನು ಪ್ರೋತ್ಸಾಹಿಸಿ ಹಾಗೆಯೇ ಮುಂದುವರೆಸಿಕೊಂಡು ಹೋಗಲು ಅವರನ್ನು ಉತ್ತೇಜಿಸುವ ದೃಷ್ಟಿಯಿಂದ 2008ರಿಂದ ಇದುವರೆಗೆ 149 ಸದಸ್ಯರಿಗೆ 'ಉತ್ತಮ ಸದಸ್ಯ' ಮತ್ತು 6 ಸದಸ್ಯರಿಗೆ 'ಪ್ರಗತಿಪರ ಕೃಷಿಕ' ಪ್ರಶಸ್ತಿ ನೀಡಿ ಸನ್ಮಾನಿಸಿ ಗೌರವಿಸಲಾಗಿದೆ.

ಸಂಘವು ಸನ್ 2019-20ನೇ ಸಾಲಿನಲ್ಲಿಯೂ ಈ ಮೊದಲಿನಂತೆ ಪ್ರಗತಿ ಪಥದಲ್ಲಿ ಸಾಗಿದೆ. ಸದಸ್ಯರು ತಮಗೆ ಆರ್ಥಿಕ ಅವಶ್ಯಕತೆಗಳುಂಟಾದಾಗ, ತುರ್ತು ಸಂದರ್ಭಗಳಲ್ಲಿ ಸಾಲಗಳನ್ನು ಪಡೆದುಕೊಳ್ಳುವುದು ಅನಿವಾರ್ಯ. ಆದರೆ ಪಡೆದ ಸಾಲವು ಉದ್ದೇಶಿತ ಕಾರ್ಯಗಳಿಗೆ ಮಾತ್ರವೇ ವಿನಿಯೋಗವಾಗುವಂತೆ ಎಚ್ಚರವಹಿಸಬೇಕು. ಅಲ್ಲದೇ ಪಡೆದ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡುವ ಪ್ರಾಮಾಣಿಕತೆಯನ್ನು ರೂಢಿಸಿಕೊಳ್ಳಬೇಕು. ಇದರಿಂದ ಸಂಘವೂ ಅಭಿವೃದ್ಧಿ ಹೊಂದುತ್ತದೆ. ಸದಸ್ಯರಿಗೂ ಒಳಿತಾಗುತ್ತದೆ. ಮಾನ್ಯ ಸದಸ್ಯರು ಈ ಕಳಕಳಿಯನ್ನು ಅರ್ಥ ಮಾಡಿಕೊಳ್ಳುತ್ತಾರೆಂಬ ನಂಬಿಕೆ ನಮ್ಮದು.

ಸಹಕಾರ ಸಂಘಗಳ ಕಾಯಿದೆ, ನಿಯಮಗಳಲ್ಲಾದ ಬದಲಾವಣೆಯಿಂದಾಗಿ ಸಂಘದ ಕಾರ್ಯಚಟುವಟಿಕೆಗಳಲ್ಲಿ, ದೈನಂದಿನ ವ್ಯವಹಾರ ಪದ್ಧತಿಯಲ್ಲಿ ಹಾಗೂ ಆಡಳಿತ ನಿರ್ವಹಣೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳುವುದು ಅವಶ್ಯಕವಾಗಿದೆ. ಈ ಮೊದಲು ಸೇವೆಯೊಂದೇ ಸಹಕಾರಿ ಸಂಘದ ಮೂಲ ಉದ್ದೇಶವಾಗಿತ್ತು. ಆದರೆ ಸಹಕಾರ ಕಾಯಿದೆಗೆ ಇತ್ತೀಚಿನ ವರ್ಷಗಳಲ್ಲಿನ ತಿದ್ದುಪಡಿಗಳಿಂದಾಗಿ ಈಗ ವ್ಯವಹಾರಿಕವಾಗಿ ಲಾಭಗಳಿಕೆಯ ಕಡೆಗೂ ಗಮನಹರಿಸುವುದು ಅನಿವಾರ್ಯವಾಗಿದೆ. ಜೊತೆಗೆ ಆರ್ಥಿಕ ಶಿಸ್ತು ಪಾಲಿಸುವುದೂ ಕಡ್ಡಾಯವಾಗಿದೆ. ಈ ಎಲ್ಲ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರಲ್ಲಿ ನಾವು ಮನವಿ ಮಾಡಿಕೊಳ್ಳುವುದೇನೆಂದರೇ ಸಂಘದೊಡನೆ ವ್ಯವಹರಿಸುವಾಗ ವ್ಯವಹಾರಿಕ ನಿಯಮ, ಆರ್ಥಿಕ ಶಿಸ್ತು ಪರಿಪಾಲನೆ ಕಡೆಗೂ ತಮ್ಮ ಗಮನವಿರಲಿ. ಪಡೆದ ಸಾಲವನ್ನು ಅಂತಿಮ ವಾಯಿದೆಯ ಅವಧಿಯೊಳಗೆ ಮರುಪಾವತಿಸುವ ರೂಢಿಯನ್ನು ಅವಶ್ಯವಾಗಿ ಪಾಲಿಸಿರಿ. ಇದರಿಂದಾಗಿ ಅವಧಿ ನಂತರ ವಸೂಲಾಗುವ ಸಾಲಗಳಿಗೆ ವಿಧಿಸುವ ದಂಡದ ಬಡ್ಡಿ ಆಕರಣೆಯಿಂದ ತಾವು ವಿನಾಯತಿ ಪಡೆಯಬಹುದು. ಜೊತೆಗೆ ಅನುತ್ಪಾದಕ ಆಸ್ತಿಗಳಿಗೆ ಸಂಘವು ಅನುವು ಮಾಡಿಡಬೇಕಾದ ಪ್ರಸಂಗವೂ ಉದ್ಭವವಾಗುವುದಿಲ್ಲ. ಸಾಲ ಪಡೆದ ಮಾನ್ಯ ಸದಸ್ಯರು ಈ ವಿಷಯವನ್ನು ತೀರಾ ಗಂಭೀರವಾಗಿ ಪರಿಗಣಿಸಿ ಸೂಕ್ತ ರೀತಿಯಲ್ಲಿ ಕ್ರಮವಹಿಸಿ ಮುಂದಿನ ದಿನಗಳಲ್ಲಿ ವ್ಯವಹರಿಸಲು ಈ ಮೂಲಕ ಮತ್ತೊಮ್ಮೆ ಮನವಿ ಮಾಡಿದೆ.

ಪ್ರಸಕ್ತ ವರ್ಷವೂ ಎಸ್.ಕೆ.ಸಿ.ಸಿ. ಸಾಲವು (ಬೆಳೆ ಸಾಲ) ಬಡ್ಡಿರಹಿತವಾಗಿದ್ದು ರೈತರಿಗೆ ವರದಾನವಾಗಿದೆ. ಆದರೆ ಸಾಲದ ವ್ಯವಹಾರದಲ್ಲಿ ಸಂಘಕ್ಕೆ ನಿಯಮಾನುಸಾರವಾಗಿ ನೀಡಬೇಕಾದ ಕನಿಷ್ಠ ಮಾರ್ಜಿನ್ (ಉಳಿಕೆ/ಲಾಭ) ಸಹ ಸಕಾಲದಲ್ಲಿ ಸಂಘಕ್ಕೆ ಜಮಾ ಬರುತ್ತಿಲ್ಲ. ಆದಾಗಿಯೂ ಇಂತಹ ವ್ಯವಹಾರಿಕ ನಷ್ಟವನ್ನು ಸಂಘವು ತಾನೇ ಭರಿಸಿಕೊಂಡು ರೈತರ ಹಿತದೃಷ್ಟಿಯಿಂದ ಕಾರ್ಯ ನಿರ್ವಹಿಸುತ್ತಿದ್ದು ಮಾನ್ಯ ಸದಸ್ಯರು ಇದನ್ನು ಮನಗಾಣಬೇಕಾಗಿ ಕೋರಿಕೆ.

**7. ಧನಸಹಾಯ:**

ಟಿಎಸ್ಎಸ್ ಶ್ರೀಪಾದ ಹೆಗಡೆ, ಕಡವೆ ವೈದ್ಯಕೀಯ ವಿಜ್ಞಾನ ಸಂಸ್ಥೆ (ಟಿಎಸ್ಎಸ್ ಆಸ್ಪತ್ರೆ)ಗೆ ಎಮ್.ಆರ್.ಐ. ಸ್ಕ್ಯಾನಿಂಗ್ ಯಂತ್ರ ಖರೀದಿಸಲು ರೂ.5 ಲಕ್ಷ ಹಾಗೂ ಡಯಾಲಿಸಿಸ್ ಯಂತ್ರ ಖರೀದಿಸಲು ರೂ.5.85 ಲಕ್ಷಗಳನ್ನು ಸಂಘದಿಂದ ದೇಣಿಗೆ ನೀಡಲಾಗಿದೆ. ಸಂಘದ ಸದಸ್ಯರು ಟಿಎಸ್ಎಸ್ ಆಸ್ಪತ್ರೆಯಲ್ಲಿ ಈ ಯಂತ್ರಗಳ ಸಹಾಯದಿಂದ ಚಿಕಿತ್ಸೆ ಪಡೆಯುವ ಸಂದರ್ಭ ಬಂದಲ್ಲಿ ಸಂಘದಿಂದ ದೃಢೀಕರಣ ಪತ್ರ ಪಡೆದು ರಿಯಾಯಿತಿ ಪಡೆಯಬಹುದಾಗಿದೆ.

ಹಾಗೂ ರೋಟರಿ ಕ್ಲಬ್, ಶಿರಸಿ ಇವರು ಎಪಿಎಂಸಿ ಆವರಣದಲ್ಲಿರುವ ರೈತ ಭವನದ ಹತ್ತಿರ ಹಿರಿಯನಾಗರಿಕರ ಜಿಮ್ ನಿರ್ಮಿಸಿದ್ದು ಈ ಕಾರ್ಯಕ್ಕೆ ಸಂಘದಿಂದ ರೂ.1.5 ಲಕ್ಷಗಳ ಧನಸಹಾಯ ನೀಡಲಾಗಿದೆ. ಸಂಘದಿಂದ ಧನಸಹಾಯ ಪಡೆದು ಸಮರ್ಪಕವಾಗಿ ಬಳಸಿದ ಟಿಎಸ್ಎಸ್ ಆಸ್ಪತ್ರೆ ಹಾಗೂ ರೋಟರಿ ಕ್ಲಬ್, ಶಿರಸಿ ಇವರುಗಳಿಗೆ ಧನ್ಯವಾದಗಳು.

ಮತ್ತು ನೆರೆಪರಿಹಾರ ನಿಧಿಗೆ ಹಾಗೂ ಕೊವಿಡ್-19 ಸೋಂಕು ತಡೆಗಟ್ಟಲು ಸ್ಥಳೀಯಮಟ್ಟದಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಆಶಾಕಾರ್ಯಕರ್ತೆಯರಿಗೆ ಧನಸಹಾಯ ನೀಡಲಾಗಿದೆ.

**8. ಶ್ರದ್ಧಾಂಜಲಿ:**

ವರದಿ ಸಾಲಿನಲ್ಲಿ ಸಂಘದ 60 ಸದಸ್ಯರು ಮೃತರಾಗಿದ್ದು, ಸಂಘದೊಂದಿಗೆ ಅವರ ಉತ್ತಮ ವ್ಯವಹಾರ ಹಾಗೂ ಸಂಘದ ಅಭಿವೃದ್ಧಿಯಲ್ಲಿನ ಅವರ ಕೊಡುಗೆಯನ್ನು ಸ್ಮರಿಸಿ, ಅವರ ದಿವ್ಯಾತ್ಮಕ್ಕೆ ಚಿರಶಾಂತಿ ದೊರೆಯಲೆಂದು ಹಾಗೂ ಅವರ ಕುಟುಂಬವರ್ಗದವರಿಗೆ ದುಃಖ ಸಹಿಸುವ ಶಕ್ತಿ ನೀಡಲೆಂದು ಪ್ರಾರ್ಥಿಸುತ್ತೇವೆ.

**ಉಪಸಂಹಾರ :**

ರಾಜ್ಯ, ಕೇಂದ್ರ ಸರಕಾರಗಳೆರಡು ಕಾಲಕಾಲಕ್ಕೆ ಬಡ್ಡಿ ರಿಯಾಯಿತಿ, ಬಡ್ಡಿ ಮನ್ನಾ ಯೋಜನೆಗಳನ್ನು ಜಾರಿಗೆ ತಂದು ನೇರವಾಗಿ ರೈತರಿಗೆ ಆರ್ಥಿಕ ಲಾಭ ನೀಡುತ್ತಿವೆ. ಘನ ಸರ್ಕಾರಗಳಿಗೆ ಸಂಘದ ಪರವಾಗಿ ಧನ್ಯವಾದಗಳನ್ನು ಹೇಳಬಯಸುತ್ತೇವೆ.

ನಮ್ಮ ಸಂಘದ 2019-20ನೇ ಸಾಲಿನ ಶಾಸನಬದ್ಧ ಲೆಕ್ಕ ಪರಿಶೋಧನೆ ನಡೆಸಿರುವ ಶ್ರೀ ಸತೀಶ ಹೆಗಡೆ, ಚಾರ್ಟರ್ಡ್ ಅಕೌಂಟೆಂಟ್ಸ್, ಶಿರಸಿ ಇವರಿಗೆ ಕೃತಜ್ಞರಾಗಿದ್ದೇವೆ. ಸಂಘಕ್ಕೆ ಕಾಲ-ಕಾಲಕ್ಕೆ ಭೇಟಿಕೊಟ್ಟು ಸೂಕ್ತ ಸಲಹೆ, ಸೂಚನೆ ಹಾಗೂ ಮಾರ್ಗದರ್ಶನ ನೀಡುತ್ತಿರುವ ಉಪನಿಬಂಧಕರು, ಸಹಕಾರ ಇಲಾಖೆ, ಕಾರವಾರ ಹಾಗೂ ಉಪನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ,

ಕಾರವಾರ ಹಾಗೂ ಕಚೇರಿಯ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಧನ್ಯವಾದಗಳು. ಸಹಾಯಕ ನಿಬಂಧಕರು, ಶಿರಸಿ ಅವರಿಗೂ ಹಾಗೂ ಕಛೇರಿಯ ಎಲ್ಲ ಸಿಬ್ಬಂದಿವರ್ಗದವರಿಗೂ ನಾವು ಕೃತಜ್ಞರಾಗಿದ್ದೇವೆ. ಸಂಘದ ಆಂತರಿಕ ಲೆಕ್ಕ ಪರಿಶೋಧನೆಯನ್ನು ಪರಿಣಾಮಕಾರಿಯಾಗಿ ಕೈಗೊಂಡು ಅಮೂಲ್ಯ ಸಲಹೆ-ಸೂಚನೆಗಳನ್ನು ನೀಡಿ ಸಾಲ ವಸೂಲಾತಿಯಲ್ಲಿ ಪ್ರಗತಿ ಮತ್ತು ಆರ್ಥಿಕ ಶಿಸ್ತು, ಒಟ್ಟಾರೆ ಸಂಘದ ಪ್ರಗತಿಗೆ ತಮ್ಮ ಕೊಡುಗೆ ನೀಡಿರುವ ಶ್ರೀ ಆರ್.ಎನ್. ಶೇಟ್‌ರವರಿಗೆ ಹಾಗೂ ರೈತರ ಪಹಣಿ ಪತ್ರಿಕೆಯಲ್ಲಿನ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಲು ಸೂಕ್ತ ಸಲಹೆ ನೀಡಿ ಸಹಕರಿಸುತ್ತಿರುವ ಸಂಘದ ಸಲಹೆಗಾರರಾದ ಶ್ರೀ ಎಂ. ಆರ್. ಹೆಗಡೆ ಇವರಿಗೆ ಮತ್ತು ಸಂಘದ ನವೀಕೃತ ಕಟ್ಟಡ ಕಾಮಗಾರಿಯ ಲೆಕ್ಕಪತ್ರ ನಿರ್ವಹಣಾ ಕಾರ್ಯವನ್ನು ಬಹಳ ವ್ಯವಸ್ಥಿತವಾಗಿ ಕೈಗೊಂಡಿರುವ ಶ್ರೀ ಎಸ್.ಎಂ. ಹೆಗಡೆ ಇವರಿಗೆ ನಾವು ಆಭಾರಿಯಾಗಿದ್ದೇವೆ. ಆದಾಯ ತೆರಿಗೆ ಕಾಯಿದೆ ಹಾಗೂ ಇನ್ನಿತರ ವಿಷಯಗಳಲ್ಲಿ ಸಂಸ್ಥೆಗೆ ಕಾಲಕಾಲಕ್ಕೆ ಸೂಕ್ತ ಸಲಹೆ ಸೂಚನೆಗಳನ್ನು ನೀಡುತ್ತಿರುವ ಆದಾಯ ತೆರಿಗೆ ಸಲಹೆಗಾರರಾದ ಸಿ.ಎ. ಪ್ರಶಾಂತ ಬಾಡಕರ ಹಾಗೂ ಸರಕು ಮತ್ತು ಸೇವಾ ತೆರಿಗೆಗೆ ಸಂಬಂಧಿಸಿ ಸಲಹೆ ಸೂಚನೆಗಳನ್ನು ನೀಡುತ್ತಿರುವ ಶ್ರೀ ಆರ್.ಜಿ. ಭಟ್, ಕಳವೆ ಇವರಿಗೂ ನಾವು ಸಂಘದ ಪರವಾಗಿ ಧನ್ಯವಾದಗಳನ್ನು ತಿಳಿಸುತ್ತಿದ್ದೇವೆ.

ನಮ್ಮ ದಿನನಿತ್ಯದ ಹಣಕಾಸಿನ ಅವಶ್ಯಕತೆಯನ್ನು ಪೂರೈಸಿ ಸಂಘವು ಪ್ರಗತಿಪಥದಲ್ಲಿ ಮುನ್ನಡೆಯಲು ಸೂಕ್ತ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸುತ್ತಿರುವ ದಿ ಕೆ.ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಮತ್ತು ಎಲ್ಲಾ ಸಿಬ್ಬಂದಿ ವರ್ಗದವರಿಗೂ ಹಾಗೂ ಕೆ.ಡಿ.ಸಿ.ಸಿ. ಬ್ಯಾಂಕಿನ ಹೊಸ ಮಾರುಕಟ್ಟೆ ಶಾಖೆಯ ವ್ಯವಸ್ಥಾಪಕರು, ಮೇಲ್ವಿಚಾರಕರು ಮತ್ತು ಎಲ್ಲಾ ಸಿಬ್ಬಂದಿ ವರ್ಗದವರಿಗೂ ನಾವು ಕೃತಜ್ಞರಾಗಿದ್ದೇವೆ.

**ನಮ್ಮ ಸದಸ್ಯರ ಕೃಷಿ ಮಹಸೂಲನ್ನು ಸುವ್ಯವಸ್ಥಿತವಾಗಿ ಅವರ ಬೇಡಿಕೆಯಂತೆ ಕಾಲ-ಕಾಲಕ್ಕೆ ಸರಿಯಾಗಿ ವಿಕ್ರಿ ಮಾಡಲು ಸಹಕಾರ ನೀಡಿದ್ದಲ್ಲದೆ ದಿನನಿತ್ಯದ ಹಣಕಾಸಿನ ಅವಶ್ಯಕತೆಗೆ ಸ್ಪಂದಿಸಿ ಸಕಾಲದಲ್ಲಿ ನೆರವು ನೀಡುತ್ತಿರುವ ದಿ ಟಿ.ಎಸ್.ಎಸ್. ಲಿ., ಶಿರಸಿ ಇದರ ಅಧ್ಯಕ್ಷರಾದ ಶ್ರೀ ಶಾಂತಾರಾಮ ಹೆಗಡೆ, ಶೀಗೇಹಳ್ಳಿ ಹಾಗೂ ಆಡಳಿತ ಮಂಡಳಿಯ ಎಲ್ಲ ಸದಸ್ಯರುಗಳಿಗೆ ಮತ್ತು ಪ್ರಧಾನ ವ್ಯವಸ್ಥಾಪಕರು ಹಾಗೂ ಎಲ್ಲ ಸಿಬ್ಬಂದಿ ವರ್ಗದವರಿಗೆ ನಮ್ಮ ಅನಂತ ಧನ್ಯವಾದಗಳು.**

ನಮ್ಮ ಸದಸ್ಯರ ಕೃಷಿ ಮಹಸೂಲನ್ನು ವಿಕ್ರಿ ಮಾಡಲು ಸಹಕಾರ ನೀಡುತ್ತಿರುವ ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿ ನಿಯಮಿತ ಶಿರಸಿ ಇದರ ಅಧ್ಯಕ್ಷರಿಗೆ ಹಾಗೂ ಆಡಳಿತ ಮಂಡಳಿಯ ಸದಸ್ಯರುಗಳಿಗೆ, ಪ್ರಧಾನ ವ್ಯವಸ್ಥಾಪಕರು ಹಾಗೂ ಎಲ್ಲ ಸಿಬ್ಬಂದಿವರ್ಗದವರಿಗೆ ನಮ್ಮ ಧನ್ಯವಾದಗಳು.

ದಿನನಿತ್ಯದ ಹಣಕಾಸಿನ ವ್ಯವಹಾರದಲ್ಲಿ ಸೂಕ್ತವಾಗಿ ಸ್ಪಂದಿಸಿ, ಸಹಕರಿಸುತ್ತಿರುವ ಬ್ಯಾಂಕ್ ಆಫ್ ಬರೋಡಾ (ವಿಜಯಾ ಬ್ಯಾಂಕ್) ಎಸ್.ಎಮ್.ಯಾರ್ಡ್, ಸ್ಟೇಟ್ ಬ್ಯಾಂಕ್ ಶಿರಸಿ, ಸಿಂಡಿಕೇಟ್ ಬ್ಯಾಂಕ್, ಶಿರಸಿ ಹಾಗೂ ಕೆನರಾ ಬ್ಯಾಂಕ್ ಶಿರಸಿ, ಇಂಡಿಯನ್ ಬ್ಯಾಂಕ್ ಶಿರಸಿ, ಬ್ಯಾಂಕ್ ಆಫ್ ಇಂಡಿಯಾ ಶಿರಸಿ ಕರ್ನಾಟಕ ಬ್ಯಾಂಕ್ ಶಿರಸಿ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಶಿರಸಿ, ಲಕ್ಷ್ಮೀವಿಲಾಸ ಬ್ಯಾಂಕ್ ಶಿರಸಿ ಇದರ ಶಾಖಾ ವ್ಯವಸ್ಥಾಪಕರು ಹಾಗೂ ಸಿಬ್ಬಂದಿಗಳಿಗೆ ಸಂಘದ ಪರವಾಗಿ ಧನ್ಯವಾದಗಳು.

ಸಂಘಕ್ಕೆ ಕಾಲ-ಕಾಲಕ್ಕೆ ಭೇಟಿಕೊಟ್ಟು ಸೂಕ್ತ ಸಲಹೆ ಸೂಚನೆ ಹಾಗೂ ಮಾರ್ಗದರ್ಶನ ನೀಡುತ್ತಿರುವ ನಬಾರ್ಡ್‌ನ ಅಧಿಕಾರಿಗಳಿಗೆ ಧನ್ಯವಾದಗಳು. ಸಂಘದೊಂದಿಗೆ ನಿರಂತರ ಸಂಪರ್ಕವಿಟ್ಟುಕೊಂಡು, ರೈತರಿಗೆ ಅನುಕೂಲವಾಗುವ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಹಕರಿಸುತ್ತಿರುವ ಕೃಷಿ ಇಲಾಖೆ ಮತ್ತು ತೋಟಗಾರಿಕಾ ಇಲಾಖೆ ಹಾಗೂ ತೋಟಗಾರಿಕಾ ಕಾಲೇಜಿನ ಅಧಿಕಾರಿಗಳಿಗೂ ನಾವು ಆಭಾರಿಯಾಗಿದ್ದೇವೆ.

ನಮ್ಮ ಜಿಲ್ಲೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಹಾಗೂ ಸದಸ್ಯರುಗಳ ಸಮಸ್ಯೆಗಳನ್ನು, ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಉತ್ತರ ಕನ್ನಡ ಜಿಲ್ಲೆಯ ಕೃಷಿ, ಕೃಷಿಕ, ಕೃಷಿ ಪತ್ತು ಸಂಘಗಳ ಶ್ರೇಯೋಭಿವೃದ್ಧಿ ಟ್ರಸ್ಟ್(ರಿ) ಶಿರಸಿ ಇದು ಸದಾ ಕಾರ್ಯ ಪ್ರವೃತ್ತವಾಗಿರುವುದನ್ನು ಶ್ಲಾಘಿಸುತ್ತೇವೆ. ಮತ್ತು ನಮ್ಮ ಸಂಘದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ.

**ಕೊನೆಯ ಮಾತು:**

ತಮಗೆಲ್ಲರಿಗೂ ತಿಳಿದಿರುವಂತೆ ಸಹಕಾರಿ ಸಂಘದ ಮುಖ್ಯ ಧ್ಯೇಯ ಸದಸ್ಯರ ಏಳ್ಗೆ ಸಾಧಿಸುವುದು. ಆ ಹಿನ್ನೆಲೆಯಲ್ಲಿ ಸಂಘವು ಕೆಲವೊಮ್ಮೆ ತನ್ನ ವ್ಯವಹಾರದಿಂದಾಗುವ ಲಾಭ-ನಷ್ಟ ಪರಿಗಣಿಸದೇ ಸದಸ್ಯರಿಗೆ ಸೇವೆ ಒದಗಿಸುತ್ತಿದೆ. ಆದ್ದರಿಂದ ಸದಸ್ಯರಲ್ಲಿ ಈ ಮೂಲಕ ನಾವು ವಿನಂತಿಸಿಕೊಳ್ಳುವುದೇನೆಂದರೆ, ಸಂಘದಿಂದ ಪಡೆದುಕೊಳ್ಳುವ ಆರ್ಥಿಕ ನೆರವನ್ನು ಸದುಪಯೋಗಪಡಿಸಿಕೊಳ್ಳಿ. ಅನುತ್ಪಾದಕ ವೆಚ್ಚಗಳನ್ನು ಕಡಿಮೆ ಮಾಡುವುದರ ಜೊತೆಗೆ ಉಳಿತಾಯ ಮನೋಭಾವನೆಯನ್ನು ರೂಢಿಸಿಕೊಳ್ಳಿ. ಪಡೆದ ಸಾಲ ಸದ್ವಿನಿಯೋಗಿಸಿ, ಅವಧಿಗೆ ಸರಿಯಾಗಿ ಮರುಪಾವತಿ ಮಾಡಿ. ಇದರಿಂದಾಗಿ ಸದಸ್ಯರ ಆರ್ಥಿಕ ಸ್ಥಿತಿ ಸುಧಾರಿಸುವುದರ ಜೊತೆಗೆ ಸಂಘವೂ ಸದೃಢವಾಗುತ್ತದೆ ಎಂಬುದನ್ನು ಸದಸ್ಯರೆಲ್ಲರೂ ಮನಗಾಣಬೇಕು. ಮುಂದಿನ ದಿನಗಳಲ್ಲೂ ಇದೇ ರೀತಿಯ ಸಹಕಾರ ಬೆಂಬಲವನ್ನು ನಿಮ್ಮೆಲ್ಲರಿಂದಲೂ ನಿರೀಕ್ಷಿಸುತ್ತ ಸಹಕಾರಿ ಪಥದಲ್ಲಿ ಆರ್ಥಿಕ ಸ್ವಾವಲಂಬಿಗಳಾಗಿ ಸಮೃದ್ಧ ಭವಿಷ್ಯದೆಡೆಗೆ ಎಲ್ಲರೂ ಒಂದಾಗಿ ಸಾಗೋಣ ಎಂದು ಆಶಿಸುತ್ತಾ ಸರ್ವರಿಗೂ ಶುಭ ಹಾರೈಸಿ, ಎಲ್ಲರ ಒಳಿತಿಗಾಗಿ ಪ್ರಾರ್ಥಿಸಿ, ವರದಿಯನ್ನು ಮುಕ್ತಾಯ ಮಾಡುತ್ತಿದ್ದೇನೆ.

**ಸಹಕಾರಂ ಗೆಲ್ಗೆ ಸಹಕಾರಂ ಬಾಳ್ಗೆ**

ಧನ್ಯವಾದಗಳು.

**ಶಿರಸಿ (ಉ.ಕ.)**
**ದಿನಾಂಕ : 17-08-2020**

ಆಡಳಿತ ಮಂಡಳಿಯ ಪರವಾಗಿ
**ಶ್ರೀ ರಾಮಕೃಷ್ಣ ಶ್ರೀಪಾದ ಹೆಗಡೆ, ಕಡವೆ**
**ಅಧ್ಯಕ್ಷರು**
ದಿ ಟಿ.ಆರ್.ಸಿ.ಎ.ಸಿ. ಸೊಸೈಟಿ ಲಿ., ಶಿರಸಿ (ಉ.ಕ.)

## ದಿನಾಂಕ 31-03-2020ಕ್ಕೆ ಇದ್ದಂತೆ ಆಯಾ ವರ್ಷಕ್ಕೆ ಸಂಬಂಧಪಟ್ಟು ರಾಜ್ಯ /ಕೇಂದ್ರ ಸರ್ಕಾರದಿಂದ ಬಿಡುಗಡೆಗೆ ಬಾಕಿ ಇರುವ ಬಡ್ಡಿ ರಿಯಾಯಿತಿ, ಬಡ್ಡಿ ಮನ್ನಾ ವಿವರ

(ರೂ.ಗಳಲ್ಲಿ)

| ವರ್ಷ | 2017–18 | 2018–19 | 2019–20 | ಅಂತೂ ಬಾಕಿ (ದಿ: 31–03–2020ಕ್ಕೆ) |
|---|---|---|---|---|
| ರಾಜ್ಯ ಸರ್ಕಾರದಿಂದ ಬರತಕ್ಕ ಬಡ್ಡಿ | 85,25,629.00 | 2,83,45,916.00 | 96,79,900.00 | 4,65,51,445.00 |
| ಕೇಂದ್ರ ಸರ್ಕಾರದಿಂದ ಬರತಕ್ಕ ಬಡ್ಡಿ | 30,96,141.00 | 59,40,620.00 | 50,91,657.00 | 1,41,28,418.00 |
| ಒಟ್ಟೂ | 1,16,21,770.00 | 3,42,86,536.00 | 1,47,71,557.00 | 6,06,79,863.00 |

ಸಂಘದಿಂದ ಸದಸ್ಯರಿಗೆ ಕೃಷಿ ಸಂಬಂಧಿಸಿ ವಿವಿಧ ಉದ್ದೇಶಗಳಿಗೆ ರಾಜ್ಯ/ಕೇಂದ್ರ ಸರಕಾರಗಳ ಬಡ್ಡಿ ರಿಯಾಯಿತಿ ಯೋಜನೆಯಡಿ ಸಾಲ ಸೌಲಭ್ಯ ನೀಡಲಾಗುತ್ತಿದೆ. ಈ ಮೇಲೆ ವಿವರಿಸಿದಂತೆ ಸದರ ಯೋಜನೆಗಳ ಬಡ್ಡಿ ರಿಯಾಯಿತಿ ರಖಂ ರಾಜ್ಯ/ಕೇಂದ್ರ ಸರಕಾರಗಳಿಂದ ಸಕಾಲದಲ್ಲಿ ಸಂದಾಯವಾಗುತ್ತಿಲ್ಲ. ಕಾರಣ ಇದರಿಂದ ಸಂಘಕ್ಕೆ ಕನಿಷ್ಠ ಅಂತರದ(ಕನಿಷ್ಠ ಮಾರ್ಜಿನ್) ರಖಂ ಕೂಡ ಸಕಾಲದಲ್ಲಿ ಬರದೇ ಆದಾಯದಲ್ಲಿ ಕೊರತೆ ಉಂಟಾಗುತ್ತಿದೆ. ಆದರೂ ಸಂಘವು ಸದಸ್ಯರ ಹಿತಾಸಕ್ತಿ ಅನುಲಕ್ಷಿಸಿ ಈ ಯೋಜನೆಗಳ ಗರಿಷ್ಠ ಪ್ರಯೋಜನ ಒದಗಿಸಲು ಪ್ರಯತ್ನಿಸುತ್ತಿದೆ.

## ದಿನಾಂಕ: 11-09-2019ರಂದು ನಡೆದ ಸಂಘದ 106ನೇ ವಾರ್ಷಿಕ ಸರ್ವಸಾಧಾರಣ ಸಭೆಯಲ್ಲಿ ಸಂಘದಿಂದ ಸನ್ಮಾನಿಸಲ್ಪಟ್ಟ ಸದಸ್ಯರುಗಳು

1) ಶ್ರೀ ಅನಂತ ವೆಂಕಟ್ರಮಣ ಹೆಗಡೆ, ಮಣ್ಸೆಕೇರಿ
2) ಶ್ರೀ ದತ್ತಾತ್ರಯ ನಾರಾಯಣ ಹೆಗಡೆ, ಕೂಕ್ನಮನೆ
3) ಶ್ರೀ ಗಣಪತಿ ನಾರಾಯಣ ಭಟ್ಟ, ಕುಕ್ರಿ
4) ಶ್ರೀ ಪರಮೇಶ್ವರ ರಾಮಕೃಷ್ಣ ಹೆಗಡೆ, ಸೋಮ್ನಳ್ಳಿ
5) ಶ್ರೀ ಗಣಪ ದ್ಯಾವಾ ಗೌಡ, ತದ್ದಲ್ಸೆ
6) ಶ್ರೀ ವೆಂಕಟ್ರಮಣ ಪರಮೇಶ್ವರ ಹೆಗಡೆ, ಹಿರೇಕೈ
7) ಶ್ರೀ ಅಣ್ಣಪ್ಪ ವಿಘ್ನೇಶ್ವರ ಭಟ್ಟ, ಕಿಬ್ಬಳ್ಳಿ(ಹಾರುಗಾರ)
8) ಶ್ರೀ ಮಂಜಪ್ಪ ರವಳ್ಯಾ ನಾಯ್ಕ, ಕುಪ್ಪಳ್ಳಿ
9) ಶ್ರೀ ಗೋಪಾಲ ಈಶ್ವರ ಹೆಗಡೆ, ದಾಸನಕೊಪ್ಪ
10) ಶ್ರೀ ನಾರಾಯಣ ಸುಬ್ರಾಯ ಹೆಗಡೆ, ಕಂಬಿಗಾರ ಯಡಳ್ಳಿ
11) ಶ್ರೀ ಗಜಾನನ ಗಣಪತಿ ಭಟ್ಟ, ಕೊಪ್ಲತೋಟ
12) ಶ್ರೀ ಸೂರ್ಯನಾರಾಯಣ ರಾಮಕೃಷ್ಣ ಹೆಗಡೆ, ದೇವದಕೇರಿ
13) ಶ್ರೀ ಪರಮೇಶ್ವರ ಗಣಪತಿ ಹೆಗಡೆ, ಮುಂಡದೋಟ
14) ಶ್ರೀಮತಿ ಪಾರ್ವತಿ ಗಣಪತಿ ಭಟ್ಟ, ಕಿಬ್ಬಳ್ಳಿ
15) ಶ್ರೀಮತಿ ಶ್ರೀ ಗೌರಿ ರಾಮಚಂದ್ರ ಹೆಗಡೆ, ಮಣ್ಕಣಿ
16) ಶ್ರೀಮತಿ ರುಕ್ಮಿಣಿ ಜಾನು ಕುಣಬಿ, ಇಳೇಹಳ್ಳಿ

## ದಿ ತೋಟಗಾರ್ಸ್ ರೂರಲ್ ಕೋ–ಆಪರೇಟಿವ್

**ದಿನಾಂಕ: 01–04–2019 ರಿಂದ 31–03–2020ರ ವರೆಗಿನ**

| ಸನ್ 2018–2019ರ ರಖಂ ರೂ. ಪೈಸೆ | ಹಾನಿ ವಿವರ | ಸನ್ 2019–2020 ರ ರಖಂ ರೂ. ಪೈಸೆ |
|---:|---|---:|
| 2,29,90,031.00 | ಠೇವುಗಳ ಮೇಲಿನ ಬಡ್ಡಿ | 2,57,91,567.99 |
| 5,45,518.00 | ಸಾಲಗಳ ಮೇಲಿನ ಬಡ್ಡಿ(ಕೆಡಿಸಿಸಿ ವ ಇತರ) | 12,65,303.00 |
| 2,03,600.00 | ಮುದ್ರಣ (ಪ್ರಿಂಟಿಂಗ್) | 3,10,195.00 |
| 12,660.00 | ಜಾಹೀರಾತು ವೆಚ್ಚ | 15,950.00 |
| 17,122.00 | ವರ್ತಮಾನ ಪತ್ರಿಕೆ | 8,948.00 |
| 28,477.00 | ಅಂಚೆ ವೆಚ್ಚ | 48,650.00 |
| 53,747.00 | ಸ್ಟೇಶನರಿ | 27,848.00 |
| 44,126.00 | ದೂರವಾಣಿ ವೆಚ್ಚ | 53,377.00 |
| 59,629.00 | ವಿಮೆ(ಆಫೀಸ್) | 51,600.00 |
| 1,000.00 | ವೃತ್ತಿ ಕರ(ಆಫೀಸ್) | 1,000.00 |
| 1,16,540.00 | ಸಾಫ್ಟವೇರ್ ಮತ್ತು ಹಾರ್ಡ್‌ವೇರ ನಿರ್ವಹಣೆ ಖರ್ಚು | 89,811.00 |
| 33,397.00 | ಆಫೀಸ್ ಕಟ್ಟಡ ಕರ(ನಗರ ಸಭೆ) | 33,356.00 |
| 6,29,001.00 | ಕಟ್ಟಡದ ರಿಪೇರಿ ವ ಬಣ್ಣದ ಖರ್ಚು | ---- |
| 21,383.00 | ತೆರಿಗೆ ವ ಇತರ ಶುಲ್ಕ ಪಾವತಿ | 5,090.00 |
| 86,778.00 | ವಿದ್ಯುತ್ ವೆಚ್ಚ ಖಾತೆ | 1,16,024.00 |
| 3,04,401.00 | ಕಛೇರಿ ನಿರ್ವಹಣಾ ವೆಚ್ಚ | 3,78,938.00 |
| 36,872.00 | ವಾಹನ ನಿರ್ವಹಣಾ ವೆಚ್ಚ | 21,040.00 |
| 4,28,000.00 | ಮೆಂಬರರ ವಿಕ್ರಿ ಪ್ರೋತ್ಸಾಹನ | 4,62,500.00 |
| 6,77,694.98 | ಇತರೆ | 6,08,037.91 |
| 31,155.00 | ಕಾಯಿದೆ ಸಲಹೆ ಫೀ | 48,740.00 |
| 89,401.00 | ಬೋರ್ಡ್ ಡೈರೆಕ್ಟರ ಭತ್ಯೆ | 97,593.00 |
| 41,72,676.00 | ನೌಕರರ ಪಗಾರು | 52,28,388.00 |
| 4,20,983.00 | ನೌಕರರ ಪ್ರೊ.ಫಂ. ವಂತಿಗೆ | 4,03,514.00 |
| 1,84,314.00 | ನೌಕರರ ಗ್ರ್ಯಾಚುಟಿ ಫಂಡ್ ವಂತಿಗೆ | 14,46,227.00 |
| 1,07,919.00 | ಸಿಬ್ಬಂದಿಗಳ ಗಳಿಕೆ ರಜೆ ನಗಧಿಕರಣ ಅನುವು ಹಾನಿಗೆ | 6,23,660.00 |
| 2,81,500.00 | ಗುತ್ತಿಗೆ ಸಿಬ್ಬಂದಿ ವೇತನ | 12,96,446.00 |
| 75,337.00 | ಭದ್ರತಾ ಸಿಬ್ಬಂದಿ ವೇತನ | 67,071.00 |
| 38,236.00 | ನೌಕರರ ಪ್ರವಾಸ ವ ಇತರೆ ಭತ್ಯೆಗಳು | 16,924.00 |
| 1,98,000.00 | ಆಂತರಿಕ ಲೆಕ್ಕ ಪರಿಶೋಧನಾ ಶುಲ್ಕ | 2,04,000.00 |
| 53,605.00 | ಇಎಸ್ಐ ವಂತಿಗೆ(ಸಂಘ) | 57,644.00 |
| 68,960.00 | ಅಧ್ಯಯನ ಪ್ರವಾಸ ಖರ್ಚು | --- |
| 4,30,164.00 | ಜನರಲ್ ಮೀಟಿಂಗ್ ಖರ್ಚು | 7,29,460.00 |
| 45,738.00 | ಸನ್ಮಾನ ಸಮಾರಂಭ ಖರ್ಚು | 47,678.00 |
| 9,840.00 | ಕೆ.ಸಿ.ಸಿ. ಸಾಲದ ಅಪಘಾತ ವಿಮಾ ವಂತಿಗೆ | 4,980.00 |
| 1,19,219.00 | ಕಟ್ಟಡ ಸವಕಳಿ | 18,57,021.00 |
| 1,64,034.00 | ಡೆಡ್‌ಸ್ಟಾಕ ಸವಕಳಿ | 3,87,212.00 |
| 2,50,000.00 | ಲೆಕ್ಕ ಪರಿಶೋಧನೆ ಶುಲ್ಕ | 2,50,000.00 |
| 1,50,000.00 | ಕೃಷಿ ಪತ್ತಿನ ಸ್ಥಿರೀಕರಣ ನಿಧಿಗೆ ವರ್ಗಾಯಿಸಿದ್ದು | 1,00,000.00 |
| 29,967.00 | ಚುನಾವಣಾ ವೆಚ್ಚ | --- |
| 21,960.00 | ಡೆಡ್‌ಸ್ಟಾಕ್ ಮೊಟಕುಗೊಳಿಸಿದ ರಖಂ | 1,74,441.00 |
| 3,65,35,876.00 | ರಾ.ಸ.ಕ್ಲೇಮ ಆದಲ್ಲಿ ಕೆಡಿಸಿಸಿಗೆ ಕೊಡತಕ್ಕದ್ದು (ಹಾನಿಗೆ) | 3,80,48,987.00 |
| 61,90,842.00 | ಕೆ.ಸ.ಕ್ಲೇಮ ಆದಲ್ಲಿ ಕೆಡಿಸಿಸಿಗೆ ಕೊಡತಕ್ಕದ್ದು (ಹಾನಿಗೆ) | 60,97,340.00 |
| 1,80,000.00 | ಅಧ್ಯಕ್ಷರ ಗೌರವ ಧನ | 1,80,000.00 |
| 10,22,935.00 | ಕಛೇರಿ ಕೆಲಸದ ಡಾಟಾ ಎಂಟ್ರಿ | 1,83,633.00 |
| 7,332.00 | ಪ್ರಧಾನ ಮಂತ್ರಿ ಬಿಮಾ ಯೋಜನೆ | --- |
| 9,00,000.00 | ಸಂಜೀವಿನಿ ನಿಧಿಗೆ ವರ್ಗಾಯಿಸಿದ್ದು | 60,00,000.00 |
| --- | ನವೀಕೃತ ಕಟ್ಟಡ ಉದ್ಘಾಟನಾ ಸಮಾರಂಭ ಖರ್ಚು | 4,62,248.00 |
| 14,074.00 | ಸ್ಥಿರಾಸ್ತಿ ಮೊಟಕುಗೊಳಿಸಿದ ರಖಂ | --- |
| 68,424.00 | ಜಿ.ಎಸ್.ಟಿ | 1,36,844.00 |
| --- | ನೆರೆ/ಬರ ಸಂತ್ರಸ್ತರ ಪರಿಹಾರ | 27,066.00 |
| --- | ಕಟ್ಟಡ ಬಾಡಿಗೆ | 56,640.00 |
| --- | ಕಟ್ಟಡ ನಿಧಿಗೆ ವರ್ಗಾಯಿಸಿದ ರಖಂ | 1,00,000.00 |
| 94,83,471.00 | ನಿಕ್ಕಿ ಲಾಭ | 73,45,714.99 |
| **8,76,35,938.98** | **ಅಂತೂ** | **10,09,68,707.89** |

ಲೆಕ್ಕಿಗ ಮುಖ್ಯಕಾರ್ಯನಿರ್ವಾಹಕ

# ಅಗ್ರಿಕಲ್ಚರಲ್ ಕ್ರೆಡಿಟ್ ಸೊಸೈಟಿ ಲಿ., ಶಿರಸಿ (ಉ.ಕ.)

## ಲಾಭ-ಹಾನಿ ಪತ್ರಿಕೆ

| ಸನ್ 2018-2019ರ ರಖಂ ರೂ. ಪೈಸೆ | ಲಾಭದ ವಿವರ | ಸನ್ 2019-2020 ರ ರಖಂ ರೂ. ಪೈಸೆ |
|---|---|---|
| 5,09,36,451.00 | ಸಾಲಗಳ ಮೇಲಿನ ಬಡ್ಡಿ | 5,33,08,099.00 |
| 1,64,63,296.00 | ಗುಂತಾವಣೆಗಳ ಮೇಲಿನ ಬಡ್ಡಿ | 2,08,23,098.00 |
